# ಯುವ ಸಹಕಾರಿಗಳಿಗೆ ಸಹಕಾರ ಶಿಕ್ಷಣ ನೀಡುವುದು ನಮ್ಮ ಗುರಿ

• ಉದಯವಾಹಿನಿ, ಚಾಮರಾಜನಗರ



ಉದಯವಾಹಿನಿ ಚಿತ್ರ

ಸಹಕಾರ ಕ್ಷೇತ್ರಕ್ಕೆ ಬರುವ ಯುವಕರು ಹಾಗೂ ಯುವತಿಯರಿಗೆ ಸಹಕಾರ ಶಿಕ್ಷಣದ ನೀಡುವ ಮೂಲಕ ಅವರನ್ನು ಸಂಪೂರ್ಣವಾಗಿ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು ನಮ್ಮ ಒಕ್ಕೂಟದ ಉದ್ದೇಶವಾಗಿದೆ ಎಂದು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರು ಆದ ಚಾಮುಲ್ ನಿರ್ದೇಶಕ ಎಚ್.ಎಸ್. ನಂಜುಂಡಪ್ರಸಾದ್ ತಿಳಿಸಿದರು.

ನಗರದ ವರ್ತಕರ ಭವನದಲ್ಲಿ ಚಾಮರಾಜನಗರ ಜಿಲ್ಲಾ ಸಹಕಾರ ಒಕ್ಕೂಟದಿಂದ ನಡೆದ 2025-26ನೇ ಸಾಲಿನ 27ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಗಡಿ ಜಿಲ್ಲೆಯಲ್ಲಿ ಸಹಕಾರ ಕ್ಷೇತ್ರವನ್ನು ಪ್ರಬಲವಾಗಿ ಬೆಳೆಸಲು ಜಿಲ್ಲಾ ಸಹಕಾರಿ ಒಕ್ಕೂಟ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ಈ ನಿಟ್ಟಿನಲ್ಲಿ ಒಕ್ಕೂಟದಿಂದ ಸಹಕಾರ ಕಾಯ್ದೆಗಳು ಹಾಗೂ ಬೈಲಾ ತಿದ್ದುಪಡಿಗಳ ಬಗ್ಗೆ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ ತರಬೇತಿ ಕಾರ್ಯಾಗಾರವನ್ನು ಆಯೋಜನೆ ಮಾಡುವ ಜೊತೆಗೆ ಅವರಿಗೆ ಸಹಕಾರಿ ವಲಯದ ಕಾಯ್ದೆ ಕಟ್ಟಳೆಗಳ ಬಗ್ಗೆ ಸಂಪೂರ್ಣ ಅರಿವು ಮೂಡಿಸಲಾಗುತ್ತದೆ ಎಂದರು. ಜಿಲ್ಲೆಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು, ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಇತರೇ ಸಹಕಾರ ಸಂಘಗಳು ಸೇರಿದ 450ಕ್ಕು ಹೆಚ್ಚು ಸಂಘಗಳು ಒಕ್ಕೂಟದ ಸದಸ್ಯತ್ವವನ್ನು ಪಡೆದುಕೊಂಡಿವೆ. ಪ್ರತಿ ವರ್ಷದ ಲಾಭದಲ್ಲಿರುವ ಸಹಕಾರಿ ಸಂಘಗಳು ಶೇಕಡ 2 ರಷ್ಟು ಸಹಕಾರ ಶಿಕ್ಷಣ ನಿಧಿಯನ್ನು ಮಹಾ ಮಂಡಲಗೆ ನೀಡುತ್ತಿವೆ. ಈ ಹಣದಲ್ಲಿ ಸಹಕಾರಿಗಳಿಗೆ ಶಿಕ್ಷಣವನ್ನು ನೀಡುವುದು ನಮ್ಮ ಮೊದಲ ಅದ್ಯತೆಯಾಗಿದೆ ಎಂದರು. ಮುಂದಿನ ದಿನಗಳಲ್ಲಿ ಆಯಾ ತಾಲೂಕು ಕೇಂದ್ರಗಳಲ್ಲಿ ಕಾರ್ಯಾಗಾರವನ್ನು ಆಯೋಜನೆ ಮಾಡುವ ಜೊತೆಗೆ ಸಂಘದ ನಿರ್ದೇಶಕರಿಗು ಕಾರ್ಯಕ್ರಮವನ್ನು ರೂಪಿಸಲು ಕ್ರಮ ವಹಿಸಲಾಗುತ್ತದೆ.

# ಅಕ್ಷರದವ್ವ ಕವಿಗೋಷ್ಠಿ-2026 ಕಾರ್ಯಕ್ರಮ

• ಉದಯವಾಹಿನಿ, ಮಳವಳ್ಳಿ

ಮಳವಳ್ಳಿಯಲ್ಲಿ ರಾಜ್ಯಮಟ್ಟದ ಅಕ್ಷರದವ್ವ ಕವಿಗೋಷ್ಠಿ-2026 ತಾಲ್ಲೂಕು ದಲಿತ ಸಾಹಿತ್ಯ ಪರಿಷತ್ ಯುನಿವರ್ಸಲ್ ಸೇವಾ ಟ್ರಸ್ಟ್ ಇವರ ಸಂಯುಕ್ತ ಆಶ್ರಯದಲ್ಲಿ ಬಹಳ ಅರ್ಥಪೂರ್ಣವಾಗಿ ಕಾರ್ಯಕ್ರಮ ಜರುಗಿತು ಕಾರ್ಯಕ್ರಮದಲ್ಲಿ ನೂರಾರು ಕವಿಗಳು ತಮ್ಮ ಸ್ವರಚಿತ ಕವನಗಳನ್ನು ವಾಚಿಸುವ ಮುಖಾಂತರ ಕಾರ್ಯಕ್ರಮಕ್ಕೆ ಮೆರಗು ನೀಡಿದರು ಹಾಗೂ ಇದೇ ಸಂದರ್ಭದಲ್ಲಿ ಸಾಧಕರಿಗೆ ಪ್ರಶಸ್ತಿ ಸನ್ಮಾನಗಳನ್ನು ಆಯೋಜಕರಾದ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚುಂಚಣ್ಣ ಬಿ ಕಲ್ಲಾರೆ ಪುರಸ್ಕರಿಸಿದ್ದು ಐದನೇ ರಾಜ್ಯಮಟ್ಟದ ಅಕ್ಷರದವ್ವ ಕವಿಗೋಷ್ಠಿಗೆ ರಾಜ್ಯದ ವಿವಿಧ ಜಿಲ್ಲೆ ತಾಲ್ಲೂಕುಗಳಿಂದ ಆಗಮಿಸಿದ ಎಲ್ಲಾ ಕವಿ ಮಿತ್ರರು ಅಭಿನಂದಿಸಿ ಗೌರವಿಸಿದರು ಯಶಸ್ವಿ 5ನೇ ರಾಜ್ಯಮಟ್ಟದ ಕವಿಗೋಷ್ಠಿಯನ್ನು ಅಚ್ಚುಕಟ್ಟಾಗಿ ಆಯೋಜನೆ ಮಾಡಿ ಯುವಕವಿಗಳಿಗೆ ಎಲ್ಲಾ ವಯೋಮಾನದ ಕವಿಗಳಿಗೆ ವೇದಿಕೆಯನ್ನು ನೀಡುತ್ತಾ ಉತ್ತಮವಾದ ಸಾಂಸ್ಕೃತಿಕ ಚುಂಚಣ್ಣ ರವರು ಹೆಚ್ಚು ಹೆಚ್ಚು ಕವಿಗೋಷ್ಠಿಗಳನ್ನು ಹಾಗೂ ಬೇರೆ ಬೇರೆ ಕಾರ್ಯಕ್ರಮಗಳನ್ನು ಆಯೋಜನೆ ಕನ್ನಡ ಭಾಷೆ ಸಾಹಿತ್ಯವನ್ನು ಉಳಿಸುವ ಬೆಳೆಸುವ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಶುಭ ಕೋರಿದರು ಕವಿಗೋಷ್ಠಿಯ ಸಂಚಾಲಕರಾದ ಜೆ ಶಿವರಾಜ್ ಪೂರ್ಣಚಂದ್ರ ಸಂಶೋಧಕರು ಹಾಗೂ ಸಾಹಿತಿಗಳಾದ ನಾಗರತ್ನಮ್ಮ ಚೈತ್ರ ಕವಿಗಳು ಅಭಿನಂದಿಸಿ ಗೌರವಿಸಿದರು.

# ಭಾರತದ ಭವಿಷ್ಯ ರೂಪಿಸಲು ಯುವ, ಶಿಕ್ಷಣವಂತ ನಾಯಕರ ಅಗತ್ಯ

## ಸಂಸತ್ತಿನ ಕಾರ್ಯಾಚರಣೆಯ ಪ್ರಾಯೋಗಿಕ ಅನುಭವವನ್ನು ನೀಡುತ್ತದೆ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ನೆರವಾಗುತ್ತದೆ

• ಉದಯವಾಹಿನಿ, ಮೈಸೂರು

1 ಯಂಗ್ ಇಂಡಿಯನ್ಸ್ ಪಾರ್ಲಿಮೆಂಟ್
2 ಷ್ಟ ಚೌಕಟ್ಟನ್ನು ಒದಗಿಸುತ್ತದೆ
3 ಇಂತಹ ಅವಕಾಶಗಳ ಅಗತ್ಯವಿದೆ

ರೈತರು, ಸಾಮಾನ್ಯ ಜನರು ಮತ್ತು ಗ್ರಾಮೀಣ ಸಮುದಾಯಗಳ ಕಳಕಳಿಗಳಿಗೆ ಸ್ಪಂದಿಸುವ ಸಾಮರ್ಥ್ಯವಿರುವ ಯುವ, ಶಿಕ್ಷಣವಂತ ಹಾಗೂ ಜವಾಬ್ದಾರಿಯುತ ನಾಯಕರ ನೂತನ ಪೀಳಿಗೆಯ ಅಗತ್ಯ ಭಾರತಕ್ಕಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಮಲ್ಲಿಕಾರ್ಜುನ ಬಾಲದಂಡಿ ಹೇಳಿದರು.

ಕೂರ್ಗಳ್ಳಿಯ ಎಕ್ಸೆಲ್ ಪಬ್ಲಿಕ್ ಶಾಲೆಯಲ್ಲಿ ಸಿಐಐ ಮೈಸೂರಿನ ಯುವ ಸಂಘಟನೆಯಾದ 'ಯಂಗ್ ಇಂಡಿಯನ್ಸ್' ಆಯೋಜಿಸಿದ್ದ ಎರಡು ದಿನಗಳ 'ಯಂಗ್ ಇಂಡಿಯನ್ಸ್ ಪಾರ್ಲಿಮೆಂಟ್ 2026 ದಕ್ಷಿಣ ಪ್ರಾದೇಶಿಕ ಸುತ್ತು' ಉದ್ಘಾಟಿಸಿ ಅವರು ಮಾತನಾಡಿದರು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಸಂಸತ್ತಿನ ಕಾರ್ಯಾಚರಣೆಯ ಪ್ರಾಯೋಗಿಕ ಅನುಭವವನ್ನು ನೀಡುತ್ತದೆ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ನೆರವಾಗುತ್ತದೆ ಎಂದರು. ಸಂವಿಧಾನವು ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಿಗೆ ಚುನಾವಣೆಗಳು, ಅಧಿವೇಶನಗಳ ನಡಾವಳಿ ಮತ್ತು ವಿಧೇಯಕಗಳನ್ನು ಅಂಗೀಕರಿಸುವ ಪ್ರಕ್ರಿಯೆಗಳನ್ನು ಒಳಗೊಂಡಂತೆ ಸ್ಪಷ್ಟ ಚೌಕಟ್ಟನ್ನು ಒದಗಿಸುತ್ತದೆ. ''ಪ್ರತಿಯೊಬ್ಬ ವ್ಯಕ್ತಿಯಲ್ಲೂ ನಾಯಕತ್ವದ ಗುಣಗಳಿರುತ್ತವೆ, ಆದರೆ ಆ ಗುಣಗಳನ್ನು ಹೊರತರಲು ಇಂತಹ ಅವಕಾಶಗಳ ಅಗತ್ಯವಿದೆ,'' ಎಂದು ಹೇಳಿದ ಅವರು, ಸಾರ್ವಜನಿಕ ಜೀವನದಲ್ಲಿ ಹೆಚ್ಚಿನ ಜವಾಬ್ದಾರಿಗಳನ್ನು ವಹಿಸಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಜೊತೆಗೆ ರೈತರ ಕಲ್ಯಾಣ, ಶಿಕ್ಷಣ, ಆರೋಗ್ಯ ರಕ್ಷಣೆ, ಗ್ರಾಮೀಣ ಕುಡಿಯುವ ನೀರು ಪೂರೈಕೆ, ಮೂಲಸೌಕರ್ಯ ಮತ್ತು ಉದ್ಯೋಗ ಸೃಷ್ಟಿಯತ್ತ



ಉದಯವಾಹಿನಿ ಚಿತ್ರ

ಯುವ ನಾಯಕರು ಗಮನ ಹರಿಸಬೇಕು ಎಂದು ಮನವಿ ಮಾಡಿದರು.

'ವೈಐಪಿ' ಕಾರ್ಯಕ್ರಮವನ್ನು ''ನಾಯಕತ್ವದ ಪ್ರಯೋಗಾಲಯ'' ಎಂದು ಬಣ್ಣಿಸಿದ ಅವರು, ಕೃತಕ ಬುದ್ಧಿಮತ್ತೆಯ (ಎಐ) ಈ ಯುಗದಲ್ಲಿ ವಿದ್ಯಾರ್ಥಿಗಳು ಸ್ವತಂತ್ರ ಮತ್ತು ಮೂಲ ಚಿಂತನೆಯನ್ನು ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ''ಎಐ ಯುಗದಲ್ಲಿ ಮಾಹಿತಿ, ಅಂಕಿಅಂಶಗಳು ಮತ್ತು ಸತ್ಯಗಳು ಎಲ್ಲರಿಗೂ ಸುಲಭವಾಗಿ ಸಿಗುತ್ತವೆ. ಯಂಗ್ ಇಂಡಿಯನ್ಸ್ ಮೈಸೂರು ಘಟಕದ ಅಧ್ಯಕ್ಷೆ ಪ್ರಿಯಾಂಕಾ ಶ್ರೀಧರ್ ಮಾತನಾಡಿ, ವೈಐಪಿ ವಿದ್ಯಾರ್ಥಿಗಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮತ್ತು ಸಂಸತ್ತಿನ ಕಲಾಪಗಳ ಪ್ರತ್ಯಕ್ಷ ಅನುಭವವನ್ನು ಪಡೆಯಲು ಉತ್ತಮ ವೇದಿಕೆಯನ್ನು ಒದಗಿಸುತ್ತದೆ ಎಂದರು. ಸ್ಪರ್ಧೆಯಲ್ಲಿ ಭಾಗವಹಿಸುವವರು ತಮ್ಮ ಅತ್ಯುತ್ತಮ ಪ್ರದರ್ಶನ ನೀಡುವಂತೆ ಪ್ರೋತ್ಸಾಹಿಸಿದ ಅವರು, ಈ ಪ್ರಾದೇಶಿಕ ಸುತ್ತು ಕೇವಲ ಒಂದು ಆರಂಭವಷ್ಟೇ. ಸಾರ್ವಜನಿಕ ಜೀವನಕ್ಕೆ ಪ್ರವೇಶಿಸಲು ಬಯಸುವವರು ಭವಿಷ್ಯದಲ್ಲಿ ದೊಡ್ಡ ಸವಾಲುಗಳನ್ನು ಎದುರಿಸಬೇಕಾಗುತ್ತದೆ ಮತ್ತು ಬಲವಾದ ತಂತ್ರಗಳನ್ನು ರೂಪಿಸಬೇಕಾಗುತ್ತದೆ ಎಂದರು. ''ಇದು ಕೇವಲ ಸಣ್ಣ ಹೋರಾಟ. ನೀವು ನಿಜವಾಗಿಯೂ ಸಂಸತ್ತನ್ನು ಪ್ರವೇಶಿಸಲು ಬಯಸಿದರೆ, ದೊಡ್ಡ ಸವಾಲುಗಳನ್ನು ಎದುರಿಸಬೇಕು ಮತ್ತು ಬೃಹತ್ ತಂತ್ರಗಳನ್ನು ರೂಪಿಸಬೇಕಾಗುತ್ತದೆ, ಎಂದರು. ಕಳೆದ 10 ದಿನಗಳಿಂದ ವಿದ್ಯಾರ್ಥಿಗಳು ತೋರಿದ ಉತ್ಸಾಹ ಮತ್ತು ಸಿದ್ಧತೆಯನ್ನು ಅವರು ಶ್ಲಾಘಿಸಿದರು ಹಾಗೂ ರಾಷ್ಟ್ರೀಯ ಸುತ್ತಿಗೆ ಅರ್ಹತೆ ಪಡೆಯುವವರಿಗೆ ಶುಭ ಹಾರೈಸಿದರು. ಮುಕ್ತಾಯಗೊಳ್ಳಲಿರುವ ಈ ಪ್ರಾದೇಶಿಕ ಸುತ್ತಿನಲ್ಲಿ ಮೈಸೂರು, ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಕೋಯಿಕ್ಕೋಡ್, ಕೊಚ್ಚಿ ಮತ್ತು ತಿರುವನಂತಪುರಂ ಸೇರಿದಂತೆ ಕರ್ನಾಟಕ ಮತ್ತು ಕೇರಳದ ಸುಮಾರು 165 ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಾರೆ.

> ನಿಮ್ಮನ್ನು ಇತರರಿಗಿಂತ ಭಿನ್ನವಾಗಿಸುವುದು ನಿಮ್ಮ ಸ್ವಂತ ಚಿಂತನೆ,'' ಎಂದು ಹೇಳಿದ ಅವರು, ವಿದ್ಯಾರ್ಥಿಗಳು ಮಾನವೀಯ ಸ್ಪಂದನೆಯನ್ನು ಉಳಿಸಿಕೊಂಡು ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವ ಗುಣ ಬೆಳೆಸಿಕೊಳ್ಳಬೇಕು ಎಂದರು. -ಮಲ್ಲಿಕಾರ್ಜುನ ಬಾಲದಂಡಿ

> ಸಿಐಐ ಮೈಸೂರು ಘಟಕದ ಅಧ್ಯಕ್ಷ ಉತ್ಸವ್ ಅಗರ್ವಾಲ್ ಮಾತನಾಡಿ, ನಾಯಕತ್ವ ಎಂಬುದು ಕೇವಲ ಹುದ್ದೆಯಲ್ಲ, ಅದು ಮೌಲ್ಯಗಳು, ಮೂಲಚಿಂತನೆ ಮತ್ತು ಜನರೊಂದಿಗೆ ಕೆಲಸ ಮಾಡುವ ಸಾಮರ್ಥ್ಯವಾಗಿದೆ ಎಂದರು. -ಮಲ್ಲಿಕಾರ್ಜುನ ಬಾಲದಂಡಿ

# ಮಿನಿ ನ್ಯೂಸ್

## ಹಿಂದೂಗಳೆಲ್ಲರೂ ಒಂದಾಗುವ ಸದಾವಕಾಶ: ಸಚ್ಚಿದಾನಂದ ಶ್ರೀ ಕರೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಮೈಸೂರು

ಗಣೇಶೋತ್ಸವವು ಕೇವಲ ಧಾರ್ಮಿಕ ಆಚರಣೆಯಲ್ಲ, ಅದು ಭಕ್ತಿ, ಸಂಸ್ಕೃತಿ, ಪರಂಪರೆ ಮತ್ತು ಸಮಾಜದ ಒಗ್ಗಟ್ಟನ್ನು ಸಾರುವ ಪರ್ವ. ಈ ಆಶಯದೊಂದಿಗೆ ಮೈಸೂರಿನಲ್ಲಿ 23ನೇ ವರ್ಷದ ಗಣೇಶ ವಿಸರ್ಜನಾ ಮಹಾ ಮೆರವಣಿಗೆ ವೈಭವದಿಂದ ನಡೆಯಲು ಸಜ್ಜಾಗಿದೆ. ದತ್ತನಗರದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಮೈಸೂರು ಸಾರ್ವಜನಿಕ ಗಣೇಶ ವಿಸರ್ಜನಾ ಸಮಿತಿ ವತಿಯಿಂದ ಸೆ. 20 ರಂದು ನಡೆಯಲಿರುವ ವಿಸರ್ಜನಾ ಮೆರವಣಿಗೆಯ ಪೋಸ್ಟರ್ ಬಿಡುಗಡೆ ಸಮಾರಂಭ ನಡೆಯಿತು. ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ನಂತರ ಮಾತನಾಡಿದ ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿಯವರು, ಗಣೇಶೋತ್ಸವದಂತಹ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಸಮಾಜವನ್ನು ಒಗ್ಗೂಡಿಸುವ ಶಕ್ತಿ ಹೊಂದಿವೆ. ಇದು ಹಿಂದೂಗಳೆಲ್ಲರೂ ಒಂದಾಗುವ ಸದವಕಾಶ. ಬನ್ನಿ, ಎಲ್ಲರೂ ಒಂದಾಗಿ ಸೇರೋಣ ಎಂದು ಭಕ್ತರಿಗೆ ಕರೆ ನೀಡಿದರು. ಕಾರ್ಯಕ್ರಮಕ್ಕೆ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ಆಶೀರ್ವಚನ ನೀಡಿದರು.ಸಮಿತಿಯ ಸದಸ್ಯ ಎಚ್.ಜಿ. ಗಿರಿಧರ್ ಮಾತನಾಡಿ, ಸೆ.20ರ ಮಧ್ಯಾಹ್ನ 1.45ಕ್ಕೆ ವಿಜಯನಗರದ ವೀರಗಣಪತಿ ದೇವಸ್ಥಾನದಿಂದ ಭವ್ಯ ಮೆರವಣಿಗೆ ಆರಂಭವಾಗಲಿದೆ ಎಂದು ಮಾಹಿತಿ ನೀಡಿದರು. 23ನೇ ವರ್ಷಕ್ಕೆ ಕಾಲಿಟ್ಟಿರುವ ಈ ಮೆರವಣಿಗೆ ವರ್ಷದಿಂದ ವರ್ಷಕ್ಕೆ ಹೆಚ್ಚಿನ ಭಕ್ತರ ಪಾಲ್ಗೊಳ್ಳುವಿಕೆ ಮತ್ತು ವೈಭವದಿಂದ ಗಮನ ಸೆಳೆಯುತ್ತಿದೆ. ಸಾವಿರಾರು ಭಕ್ತರು ಗಣಪತಿ ನಾಮಸ್ಮರಣೆಯೊಂದಿಗೆ ಹೆಜ್ಜೆ ಹಾಕುವ ಮೂಲಕ ನಗರದಲ್ಲಿ ಹಬ್ಬದ ಸಂಭ್ರಮ ಹೆಚ್ಚಿಸಲಿದ್ದಾರೆ.

## ಹಾರೋಹಳ್ಳಿಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ



ಉದಯವಾಹಿನಿ ಚಿತ್ರ


• ಉದಯವಾಹಿನಿ, ಕನಕಪುರ

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಕಾರ್ಯವನ್ನು ತಾಲ್ಲೂಕಿನ ಚೀಲೂರು ಗ್ರಾಮ ಪಂಚಾಯತಿಯಲ್ಲಿ ತಹಶೀಲ್ದಾರ್ ಹರ್ಷವರ್ಧನ್ ಮತ್ತು ತಂಡವು ನಡೆಸಿತು. ಹಾರೋಹಳ್ಳಿ ತಾಲ್ಲೂಕಿನ ಹಾರೋಹಳ್ಳಿ,ಮರಳವಾಡಿ, ಹೋಬಳಿ ವ್ಯಾಪ್ತಿಯಲ್ಲಿನ ಗ್ರಾಮ ಪಂಚಾಯತಿಗಳಿಗೆ ಬೇಟಿಕೊಟ್ಟು ಅರ್ಹ ಫಲಾನುಭವಿಗಳ ದಾಖಲಾತಿ ಪರಿಶೀಲನೆ ಪ್ರಕ್ರಿಯೆಯನ್ನು ನಡೆಸಿದರು.

ಎಸ್.ಐ.ಆರ್‌ನಲ್ಲಿ ಮತದಾರರ ಪೌರತ್ವ ಮತ್ತು ವಿಳಾಸ ದೃಢೀಕರಣಕ್ಕೆಂದು ಚುನಾವಣಾ ಆಯೋಗವು ಪಟ್ಟಿ ಮಾಡಿರುವ 11 ದಾಖಲೆಗಳಲ್ಲಿ ಪಿಆರ್‌ಸಿ.ಯಡಿಯಲ್ಲಿ ಬರುವ ಎಸ್‌ಐಆರ್. ಕರಡು ಮತದಾರರ ಪಟ್ಟಿಯನ್ನು ಫಲಾನುಭವಿಗಳ ಪರಿಶೀಲನೆ ಮಾಡಲಾಯಿತು.

2002ರಲ್ಲಿ ಮತದಾರರ ಪಟ್ಟಿಯಲ್ಲಿ ಇರುವ ಮತದಾರರನ್ನು 2026ರ ಪಟ್ಟಿಗೆ ಮ್ಯಾಪಿಂಗ್‌ಮಾಡುವ ಪ್ರಕ್ರಿಯೆ ಇದಾಗಿತ್ತು. ಈ ಹಂತದಲ್ಲಿ ಮರಳವಾಡಿ ಹೋಬಳಿ ವ್ಯಾಪ್ತಿಯಲ್ಲಿ ಬರುವ ಚೀಲೂರು ಕಾಳೇಗೌಡನ ದೊಡ್ಡಿ,ಯಡವನಹಳ್ಳಿ, ಹನುಮನಹಳ್ಳಿ, ಹನುಮಂತಪುರ, ಮರಳವಾಡಿ ಹೋಬಳಿ,ಹಾರೋಹಳ್ಳಿ ಹೋಬಳಿ ವ್ಯಾಪ್ತಿಯ ಗಿರೇನಹಳ್ಳಿ, ಬನ್ನಿಕುಪ್ಪೆ, ಹೆಬ್ಬಿದರ ಮೆಟ್ಟಲು, ದೇವರಕಗ್ಗಲಹಳ್ಳಿ, ಕೊಳ್ಳಿಗನಹಳ್ಳಿಯ ಗ್ರಾಮ ಪಂಚಾಯತಿ ವ್ಯಾಪ್ತಿಯ ಹೊನ್ನಾಲಗನದೊಡ್ಡಿ, ಹುಳಗೊಂಡನಹಳ್ಳಿ, ರಾಮಸಾಗರ ವ್ಯಾಪ್ತಿಯ ಮತದಾರರ ಪಟ್ಟಿಯ ಪರಿಶೀಲನೆ ನಡೆಸಲಾಯಿತು.

## ಸರ್ಕಾರಿ ಶಾಲೆಗಳಲ್ಲಿ ಓದಿದವರಿಗೆ ಶೇ.7.5 ಮೀಸಲಾತಿ ಸ್ವಾಗತಾರ್ಹ



ಉದಯವಾಹಿನಿ ಚಿತ್ರ


• ಉದಯವಾಹಿನಿ, ಕೋಲಾರ

ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ಮಕ್ಕಳಿಗೆ ಉನ್ನತ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ.7.5 ಮೀಸಲಾತಿ ನೀಡುವ ರಾಜ್ಯ ಸರ್ಕಾರದ ನಿರ್ಧಾರ ಶ್ಲಾಘನೀಯವಾಗಿದ್ದು, ಪೋಷಕರು ಕಾನ್ವೆಂಟ್ ವ್ಯಾಮೋಹ ಬಿಟ್ಟು ಮಕ್ಕಳನ್ನು ದಾಖಲಿಸಿ ಎಂದು ಸೂಲೂರು ಗ್ರಾ.ಪಂ ಮಾಜಿ ಅಧ್ಯಕ್ಷ ಹಾಗೂ ಹಾಲಿ ಜಿಲ್ಲಾ ಸಹಕಾರಿ ಯೂನಿಯನ್ ನಿರ್ದೇಶಕ ಪೆಮ್ಮಶೆಟ್ಟಿಹಳ್ಳಿ ಸುರೇಶ್ ಕರೆ ನೀಡಿದರು. ತಾಲ್ಲೂಕಿನ ಸೂಲೂರು ಸರ್ಕಾರಿ ಹಿರಿಯಪ್ರಾಥಮಿಕ ಶಾಲಾ ಮಕ್ಕಳಿಗೆ ತಾವೇ ಕೊಡುಗೆಯಾಗಿ ನೀಡಿರುವ ಟ್ರ್ಯಾಕ್ ಸೂಟ್ ವಿತರಿಸಿ, ಸರ್ಕಾರದ ಸೌಲಭ್ಯಗಳ ಸದುಪಯೋಗಕ್ಕೆ ಮನವಿ ಮಾಡಿ ಅವರು ಮಾತನಾಡಿದರು.ಕಾನ್ವೆಂಟ್ ವ್ಯಾಮೋಹ ಬಿಟ್ಟು ಮಕ್ಕಳಿಗೆ ಸಂಸ್ಕಾರ,ಶಿಸ್ತು, ಬದುಕು ಕಲಿಸುವ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ದಾಖಲಿಸಿ ಅವರನ್ನು ದೇಶದ ಆಸ್ತಿಯಾಗಿಸಿ ಎಂದು ಪೋಷಕರಿಗೆ ಕಿವಿಮಾತು ಹೇಳಿದ ಅವರು, ಸರ್ಕಾರದ ಶೇ.7.5 ಮೀಸಲಾಯಿತಿಯಿಂದಾಗಿ ಹಳ್ಳಿ ಮಕ್ಕಳಿಗೆ ಹೆಚ್ಚಿನ ಉಪಯೋಗವಾಗಲಿದೆ ಎಂದು ಅಭಿಪ್ರಾಯಪಟ್ಟರು.ಮೊಬೈಲ್,ಟಿವಿಯಿಂದ ದೂರವಿರಿ ಎಂದು ಮಕ್ಕಳಿಗೆ ಕಿವಿಮಾತು ಹೇಳಿದ ಅವರು, ಸರ್ಕಾರಿ ಶಾಲೆಗಳಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಶಿಕ್ಷಕರಿದ್ದು, ಗುಣಮಟ್ಟದ ಶಿಕ್ಷಣ ಇಲ್ಲಿ ಸಿಗುತ್ತಿದೆ, ಈ ನಿಟ್ಟಿನಲ್ಲಿ ಪೋಷಕರ ಮನಸ್ಥಿತಿ ಬದಲಾಗಬೇಕು ಎಂದರು.ತಾವು ಗ್ರಾ.ಪಂ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಕೈಗೊಂಡ ಕ್ರಮಗಳ ಕುರಿತು ತಿಳಿಸಿದ ಅವರು, ಶಾಲಾ ಮಕ್ಕಳಿಗೆ ಜಿಲ್ಲೆಯಲ್ಲೇ ಮೊದಲ ಬಾರಿಗೆ ಆಟೋ ಸೌಲಭ್ಯ ಒದಗಿಸಿದ ಪಂಚಾಯಿತಿ ನಮ್ಮದಾಗಿತ್ತು ಎಂದರು.

# ಬೊಮ್ಮಲಾಪುರ ರೈತನ ಜಮೀನಿನಲ್ಲಿ ಚಿರತೆ ಪ್ರತ್ಯಕ್ಷ


• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಬೊಮ್ಮಲಾಪುರ ಗ್ರಾಮದ ಬಸವರಾಜು ಎಂಬುವವರ ಜಮೀನಿನಲ್ಲಿ ಮುಂಜಾನೆ ಚಿರತೆ ಕಾಣಿಸಿಕೊಂಡಿದ್ದು, ಗ್ರಾಮಸ್ಥರು ಹಾಗೂ ರೈತರಲ್ಲಿ ಆತಂಕ ಮೂಡಿಸಿದೆ.ಜಮೀನಿನಲ್ಲಿ ಚಿರತೆ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ, ಚಿರತೆಯನ್ನ ಸೆರೆಹಿಡಿಯಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸಾಮೂಹಿಕ ನಾಯಕತ್ವ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಗುಂಡ್ಲುಪೇಟೆ ಘಟಕ ಆಗ್ರಹಿಸಿದೆ.ರೈತರ ಜಮೀನುಗಳಲ್ಲಿ ಪದೇಪದೇ ವನ್ಯಜೀವಿಗಳು ಕಾಣಿಸಿಕೊಳ್ಳುತ್ತಿರುವುದರಿಂದ ಕೃಷಿ ಚಟುವಟಿಕೆ ನಡೆಸಲು ರೈತರು ಆತಂಕಪಡುವಂತಾಗಿದೆ. ಕೂಡಲೇ ಚಿರತೆಯನ್ನು ಪತ್ತೆಹಚ್ಚಿ ಸುರಕ್ಷಿತವಾಗಿ ಸೆರೆಹಿಡಿದು, ರೈತರಲ್ಲಿ ಉಂಟಾಗಿರುವ ಭಯವನ್ನ ನಿವಾರಿಸಬೇಕು ಎಂದು ರೈತ ಸಂಘ ಒತ್ತಾಯಿಸಿದೆ.



ಉದಯವಾಹಿನಿ ಚಿತ್ರ

# ಮೂಲಭೂತ ಸೌಕರ್ಯಕ್ಕಾಗಿ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್‌ಗೆ ರೈತ ಸಂಘದ ಮನವಿ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಭೀಮನಬೀಡು ಗ್ರಾಮದಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ನೀಗಿಸುವಂತೆ ಆಗ್ರಹಿಸಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸದಸ್ಯರು ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಅವರಿಗೆ ಮನವಿ ಸಲ್ಲಿಸಿದರು. ಗ್ರಾಮದ ಪರಿಶಿಷ್ಟ ಪಂಗಡದ ಬೀದಿಯಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲು ಆಗಮಿಸಿದ್ದ ಶಾಸಕರಿಗೆ ರೈತ ಸಂಘದ ಸದಸ್ಯರು ಗ್ರಾಮದ ವಿವಿಧ ಸಮಸ್ಯೆಗಳನ್ನ ವಿವರಿಸಿದರು. ಗ್ರಾಮದ ಮರಿಸಿದ್ದಶೆಟ್ಟಿ ಅವರ ಮನೆಯಿಂದ ಬಾಣಂತಿ ಮಾರಮ್ಮ ದೇವಸ್ಥಾನದವರೆಗಿನ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ.

ಆದ್ದರಿಂದ ಈ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನ ಶೀಘ್ರವಾಗಿ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದು, ದನ-ಕರುಗಳಿಗೂ ಕುಡಿಯುವ ನೀರು ದೊರೆಯದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕುರಿತು ಗ್ರಾಮ ಪಂಚಾಯಿತಿ ಆಡಳಿತ ಮಂಡಳಿಯ ಗಮನಕ್ಕೆ ತಂದಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ಸಮಸ್ಯೆ ಪರಿಹರಿಸಿ, ಅಗತ್ಯ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಮೂರನೇ ವಾರ್ಡ್‌ನ ರಸ್ತೆಯೂ ಅಧ್ವಾನಗೊಂಡಿದ್ದು, ಮಳೆಗಾಲದಲ್ಲಿ ಮಳೆ ನೀರು ವಾಸದ ಪ್ರದೇಶಗಳಿಗೆ ನುಗ್ಗುತ್ತಿದೆ.

ಹೀಗಾಗಿ ಈ ಭಾಗದಲ್ಲಿ ಚರಂಡಿ ನಿರ್ಮಿಸಿ ನೀರು ಸರಾಗವಾಗಿ ಹರಿದುಹೋಗುವಂತೆ ಕ್ರಮ ಕೈಗೊಳ್ಳಬೇಕು. ಕುಡಿಯುವ ನೀರಿನ ಅಭಾವವಿರುವ ಪ್ರದೇಶಗಳಲ್ಲಿ ಹೊಸ ಕೊಳವೆಬಾವಿ ಕೊರೆಸಿ ನೀರಿನ ಸಂಪರ್ಕ ಕಲ್ಪಿಸಬೇಕು ಎಂದು ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಭೀಮನಬೀಡು ಗ್ರಾಮ ಘಟಕದ ಮಹಿಳಾ ಅಧ್ಯಕ್ಷೆ ದೇವಮ್ಮ, ರೂಪ, ಮಹೇಶ್, ರಾಜು, ಸುಂದರ್ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಸಾಲ ಮರುಪಾವತಿಯಿಂದಲೇ ಸಹಕಾರ ಸಂಘದ ಆರ್ಥಿಕ ಬೆಳವಣಿಗೆ

• ಉದಯವಾಹಿನಿ, ಗುಂಡ್ಲುಪೇಟೆ

ಸಾಲ ಪಡೆದವರು ಸಕಾಲದಲ್ಲಿ ಸಾಲ ಮರುಪಾವತಿ ಮಾಡಿದಾಗ ಮಾತ್ರ ಸಹಕಾರ ಸಂಘದ ಆರ್ಥಿಕ ಬೆಳವಣಿಗೆ ಸಾಧ್ಯ ಎಂದು ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಹೇಳಿದರು. ಪಟ್ಟಣದ ಬಸವೇಶ್ವರ ಕಮ್ಯೂನಿಟಿ ಹಾಲ್‌ನಲ್ಲಿ ನಡೆದ ಗುಂಡ್ಲುಪೇಟೆ ಟೌನ್ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2025-26 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನ ಉದ್ಘಾಟಿಸಿ ಅವರು ಮಾತನಾಡಿದರು. ಸಹಕಾರ ಸಂಘದ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ವಿಷಯವನ್ನ ತಂದಿದ್ದು, ಮನವಿಗೆ ಸ್ಪಂದಿಸಿರುವ ಅವರು ಸಂಘದ ಬೆಳವಣಿಗೆಗೆ ಅಗತ್ಯ ಸಹಕಾರ ನೀಡುವ ಭರವಸೆ ನೀಡಿದ್ದಾರೆ. ಪ್ರಸ್ತುತ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಟೌನ್



ಉದಯವಾಹಿನಿ ಚಿತ್ರ

ಸಹಕಾರ ಸಂಘಕ್ಕೆ ಸ್ವಂತ ಕಟ್ಟಡ ನಿರ್ಮಿಸಲು ಮುಖ್ಯಮಂತ್ರಿ ವಿಶೇಷ ಅನುದಾನದ ಮೂಲಕ ನೆರವು ನೀಡಲಾಗುವುದು ಎಂದು ತಿಳಿಸಿದರು. ದಿ. ಮಹದೇವಪ್ರಸಾದ್ ಅವರು ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದ್ದರು. ಅವರ ಹಾದಿಯಲ್ಲೇ ತಾನು ಕೂಡ ಸಂಘದ ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡುವುದಾಗಿ ಶಾಸಕರು ಭರವಸೆ ನೀಡಿದರು. ಸಂಘದ ಸಾಲ ವಿತರಣೆ, ಸಾಲ ವಸೂಲಿ, ಲಾಭಾಂಶ ಹಾಗೂ ಖರ್ಚು-ವೆಚ್ಚಗಳ ಕುರಿತು ಸದಸ್ಯರಿಗೆ ಅಗತ್ಯ ಮಾಹಿತಿಯನ್ನ ನೀಡಲಾಗುವುದು. ಆದರೆ ಸಂಘದ ಕೆಲವು ಆಂತರಿಕ ವಿಚಾರಗಳನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ. ದಾಖಲೆಗಳು ಸರಿಯಾಗಿದ್ದಲ್ಲಿ ಮಾತ್ರ ಸಾಲ ಸೌಲಭ್ಯ ನೀಡಲಾಗುತ್ತದೆ. ಹೀಗಾಗಿ ಸಂಘದ ವಹಿವಾಟಿನ ಬಗ್ಗೆ ಸದಸ್ಯರು ಯಾವುದೇ ಸಂಶಯ ಹೊಂದಬಾರದು ಎಂದು ರಮೇಶ್ ಮನವಿ ಮಾಡಿದರು.

ಉಪಾಧ್ಯಕ್ಷ ಹೊನ್ನಪ್ಪ, ನಿರ್ದೇಶಕರಾದ ಮಂಜುನಾಥ್, ವಿ.ಬಿ.ಶಿವನಾಗಪ್ಪ, ಚಂದ್ರಶೇಖರ್, ಶಿವಣ್ಣ, ರಘು ಎಸ್, ಮಧು, ರಾಧಮಣಿ, ವೆಂಕಟೇಶ್, ಭಾಗ್ಯ, ಚಿಕ್ಕಣ್ಣ, ಬ್ಯಾಂಕ್ ಪ್ರತಿನಿಧಿ ಜಿ.ಕಾರ್ತಿಕ್, ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ವನಿತಾ, ಗುಮಾಸ್ತರಾದ ಮೋಹನ್ ಕುಮಾರಿ, ಪುಷ್ಪಾವತಿ, ಪೂರ್ಣಿಮಾ, ಮಾರಾಟ ಗುಮಾಸ್ತ ರವಿ, ಸುನೀಲ್, ಪ್ರವೀಣ್, ಸಹಾಯಕ ಮಹದೇವನಾಯಕ ಸೇರಿದಂತೆ ಪಿಗ್ಮಿ ಏಜೆಂಟ್ ಹಾಗೂ ಶೇರುದಾರರು ಹಾಜರಿದ್ದರು.

### 25 ಕೋಟಿ ರೂ.ಗೂ ಅಧಿಕ ವಹಿವಾಟು

ಸಂಘದ ಅಧ್ಯಕ್ಷ ರಮೇಶ್ ಮಾತನಾಡಿ, ಕೇವಲ 10 ರೂ. ಸದಸ್ಯತ್ವದಿಂದ ಆರಂಭವಾದ ಸಂಘ ಇಂದು 25 ಕೋಟಿ ರೂ.ಗೂ ಅಧಿಕ ವಹಿವಾಟು ನಡೆಸುತ್ತಿರುವುದು ಸದಸ್ಯರು ಹಾಗೂ ಗ್ರಾಹಕರ ಸಹಕಾರದಿಂದ ಸಾಧ್ಯವಾಗಿದೆ. ಸಣ್ಣ ಪ್ರಮಾಣದಲ್ಲಿ ಆರಂಭವಾದ ಸಂಘದಲ್ಲಿ ಹಲವು ರೀತಿಯ ಸಾಲ ಸೌಲಭ್ಯಗಳನ್ನ ವಿಸ್ತರಿಸಲಾಗಿದ್ದು, ಇದರಿಂದ ರೈತಾಪಿ ವರ್ಗಕ್ಕೆ ಅನುಕೂಲವಾಗಿದೆ ಎಂದರು. ಜಿಲ್ಲೆಯಲ್ಲಿಯೇ ರೈತಪರ ವಹಿವಾಟಿನಲ್ಲಿ ಸಂಘ ಉತ್ತಮ ಸ್ಥಾನದಲ್ಲಿದ್ದು, ಶಾಸಕರ ಸಹಕಾರದಿಂದ 1.36 ಕೋಟಿ ರೂ. ಕೃಷಿ ಸಾಲವನ್ನ ವಿತರಿಸಲಾಗಿದೆ. ಸಂಘದ ವ್ಯವಹಾರದ ಬಗ್ಗೆ ಸದಸ್ಯರು ಯಾವುದೇ ಅನುಮಾನ ಪಡುವ ಅಗತ್ಯವಿಲ್ಲ. ಸಕಾಲದಲ್ಲಿ ಸಾಲ ಮರುಪಾವತಿ ಮಾಡದವರು ಶೀಘ್ರದಲ್ಲೇ ಸಾಲ ತೀರಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

# ಜಿಂಕೆ ಬೇಟೆ- ಕತ್ತರಿಸಿದ ಸ್ಥಿತಿಯಲ್ಲಿ ಮೃತದೇಹ ಪತ್ತೆ

• ಉದಯವಾಹಿನಿ, ಹನೂರು

ಮಲೆಮಹದೇಶ್ವರ ವನ್ಯಜೀವಿಧಾಮದ ಹನೂರು ವನ್ಯಜೀವಿ ಉಪ ವಿಭಾಗದ ಹನೂರು ಬಫರ್ ವಲಯದಲ್ಲಿ ಬೇಟೆಯಾಡಿದ ಗಂಡು ಜಿಂಕೆಯ ಮೃತದೇಹ ಪತ್ತೆಯಾಗಿದೆ. ಪಚ್ಚೆದೊಡ್ಡಿ ಶಾಖೆಯ ಉಪವಲಯದಲ್ಲಿ ವಲಯ ಅರಣ್ಯಾಧಿಕಾರಿ ಹಾಗೂ ಸಿಬ್ಬಂದಿ ಗಸ್ತು ನಡೆಸುತ್ತಿದ್ದಾಗ ಗುಂಡಿನ ಶಬ್ದ ಕೇಳಿಬಂದಿದೆ. ಕೂಡಲೇ ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಯಾರೂ ಪತ್ತೆಯಾಗಿಲ್ಲ. ಮರುದಿನ ಮಂಗಳವಾರ ಬೆಳಿಗ್ಗೆ ಅದೇ ಪ್ರದೇಶದಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿದಾಗ ಎದೆಯ ಭಾಗ ಮತ್ತು ಎರಡು ಮುಂಗಾಲುಗಳನ್ನು ಕತ್ತರಿಸಿದ ಸ್ಥಿತಿಯಲ್ಲಿ ಗಂಡು ಜಿಂಕೆಯ ಮೃತದೇಹ ದೊರೆತಿದೆ. ಈ ಕುರಿತು ವನ್ಯಜೀವಿ ಅಪರಾಧ ವರದಿ ದಾಖಲಿಸಿಕೊಳ್ಳಲಾಗಿದ್ದು, ಆರೋಪಿಗಳ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ. ಹನೂರು ಬಫರ್ ವಲಯದ ವಲಯ ಅರಣ್ಯಾಧಿಕಾರಿ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಮಲೈ ಮಹದೇಶ್ವರ ವನ್ಯಜೀವಿ ಧಾಮದ ಹನೂರು ವನ್ಯಜೀವಿ ಉಪವಿಭಾಗದ ಹಸನೂರು ಬಫರ್ ವಲಯದಲ್ಲಿ ನಾಡ ಬಂದೂಕಿನಿಂದ ಕಡವೆಯನ್ನು ಬೇಟೆಯಾಡಿದ ಪ್ರಕರಣದ ಬೆನ್ನಲ್ಲೇ, ಮತ್ತೊಂದು ಜಿಂಕೆಯನ್ನು ಬೇಟೆಯಾಡಿ ಕತ್ತರಿಸಿದ ಸ್ಥಿತಿಯಲ್ಲಿ ಪತ್ತೆಯಾಗಿರುವ ಘಟನೆ ಬೆಳಕಿಗೆ ಬಂದಿದೆ. ಇದು ಅರಣ್ಯ ಇಲಾಖೆಯ ವೈಫಲ್ಯಕ್ಕೆ ಸಾಕ್ಷಿ ಎಂಬುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಹನೂರು



ಉದಯವಾಹಿನಿ ಚಿತ್ರ

ಶಾಖೆಯ ಉಡುತೊರೆಹಳ್ಳಿ ಜಲಾಶಯದ ಡ್ಯಾಂ ಗೇಟ್ ಬಳಿ, ರಾತ್ರಿ ವೇಳೆ ಹಿನ್ನೀರಿನ ಅರಣ್ಯ ಪ್ರದೇಶದಲ್ಲಿ ನಾಲ್ವರು ಅಪರಿಚಿತರು ಬಂದೂಕು ಸಮೇತ ಕಡವೆಯನ್ನು ಬೇಟೆಯಾಡಿ, ಮಾಂಸವನ್ನು ತುಂಡುಗಳಾಗಿ ಮಾಡಿ ಚೀಲಗಳಲ್ಲಿ ಹೊತ್ತುಕೊಂಡು ಹೋಗಿರುವ ಘಟನೆ ನಡೆದು ಕೇವಲ ನಾಲ್ಕು ದಿನಗಳ ಅಂತರದಲ್ಲಿ, ಇದೇ ಬಫರ್ ವಲಯದ ಪಚ್ಚೆದೊಡ್ಡಿ ಶಾಖೆಯಲ್ಲಿ ಬೇಟೆಯಾಡಲಾದ ಗಂಡು ಜಿಂಕೆಯ ಮೃತದೇಹ ಪತ್ತೆಯಾಗಿದೆ.

# ಜಿಟಿಡಿಗೆ ಕೋಲಾರ ಸಹಕಾರ ಒಕ್ಕೂಟದ ಅಭಿನಂದನೆ

• ಉದಯವಾಹಿನಿ,ಕೋಲಾರ

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ ನಿಯಮಿತ ಬೆಂಗಳೂರು ಇದರ ಅಧ್ಯಕ್ಷರಾಗಿ ಆಯ್ಕೆಯಾದ ಮಾಜಿ ಸಚಿವರೂ ಆದ ಜಿ.ಟಿ. ದೇವೇಗೌಡ ಹಾಗೂ ಉಪಾಧ್ಯಕ್ಷ ಶಿವಕುಮಾರ್ ಅವರನ್ನು ಕೋಲಾರ ಜಿಲ್ಲಾ ಸಹಕಾರ ಒಕ್ಕೂಟದ ವತಿಯಿಂದ ಎಲ್ಲಾ ನಿರ್ದೇಶಕರು ಹಾಜರಿದ್ದು ಸನ್ಮಾನಿಸಿ ಗೌರವಿಸಿದರು.ಜಿಲ್ಲಾ ಸಹಕಾರಿ ಯೂನಿಯನ್ ವತಿಯಿಂದ ಮಹಾಮಂಡಳದ ಅಧ್ಯಕ್ಷರನ್ನು ಸನ್ಮಾನಿಸಲು ಇಡೀ ಒಕ್ಕೂಟದ ಎಲ್ಲಾ ನಿರ್ದೇಶಕರು ತೆರಳಿದ್ದು, ಇದೇ ಸಂದರ್ಭದಲ್ಲಿ ಅಧ್ಯಕ್ಷರಿಗೆ ಮನವಿ ಸಲ್ಲಿಸಿ ಸಹಕಾರ ರಂಗದಿಂದಾಗುವ ಆರ್ಥಿಕ ಸಬಲೀಕರಣ, ಸಹಕಾರ ಸಂಘಗಳನ್ನು ಮುನ್ನಡೆಸಲು ಅಗತ್ಯವಾದ ಕಾನೂನುಗಳ ಪರಿಚಯ ಮತ್ತಿತರ ಅಂಶಗಳ ಕುರಿತು ಜಿಲ್ಲೆಯ ಸಹಕಾರಿ ಸಂಸ್ಥೆಗಳ ನೌಕರರು, ಕಾರ್ಯದರ್ಶಿಗಳಿಗೆ ಅರಿವು ಮೂಡಿಸಲು ಯೂನಿಯನ್‌ಗೆ ಹೆಚ್ಚಿನ ಅನುದಾನದ ಅಗತ್ಯವಿದ್ದು, ಒದಗಿಸಿಕೊಡಲು ಕೋರಿದರು.

# ಶಾಂತಿಯುತ ಗೌರಿ-ಗಣೇಶ ಆಚರಣಗೆ ಡಿಸಿ ಎಂ.ಆರ್. ರವಿಕುಮಾರ್ ಕರೆ

## ಪುರಸಭ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ 'ಏಕಗವಾಕ್ಷಿ ವ್ಯವಸ್ಥೆ' (ಸಿಂಗಲ್ ವಿಂಡೋ ಸಿಸ್ಟಮ್) ಜಾರಿಗೊಳಿಸಲಾಗುತ್ತಿದೆ

• ಉದಯವಾಹಿನಿ, ಕೋಲಾರ

1 ಕಾನೂನು ಸುವ್ಯವಸ್ಥೆಗ ಧಕ್ಕಯಾಗದಂತೆ
2 ತಾಯಿ-ಮಕ್ಕಳಂತೆ ಒಗ್ಗಟ್ಟಿನಿಂದ ಹಬ್ಬಗಳನ್ನು
3 ಏಕಕಾಲದಲ್ಲಿ ಅನುಮತಿ ಪಡೆಯಬಹುದಾಗಿದೆ

'ಭಾರತವು ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ದೇಶವಾಗಿದ್ದು, ನಾವೆಲ್ಲರೂ ತಾಯಿ-ಮಕ್ಕಳಂತೆ ಒಗ್ಗಟ್ಟಿನಿಂದ ಹಬ್ಬಗಳನ್ನು ಆಚರಿಸುವ ಮೂಲಕ ಸಮಾಜದಲ್ಲಿ ಸೌಹಾರ್ದತೆ ಮೆರಯಬೇಕು ಎಂದು ಕೋಲಾರ ಜಿಲ್ಲಾಧಿಕಾರಿ ಎಂ.ಆರ್. ರವಿಕುಮಾರ್ ಅವರು ಸಾರ್ವಜನಿಕರಿಗ ಕರೆ ನೀಡಿದ್ದಾರೆ. ಮುಂಬರುವ ಗೌರಿ-ಗಣೇಶ ಹಬ್ಬದ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ಶಾಂತಿಪಾಲನಾ ಸಭಯ ಅಧ್ಯಕ್ಷತೆ ವಹಿಸಿದ ಅವರು ಮಾತನಾಡಿ, ಹಬ್ಬದ ನೆಪದಲ್ಲಿ ಕಾನೂನು ಸುವ್ಯವಸ್ಥೆಗ ಧಕ್ಕಯಾಗದಂತೆ ಹಾಗೂ ಯಾರಿಗೂ ತೊಂದರಯಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗ ನಿರ್ದೇಶನ ನೀಡಿದರು. ಗಣೇಶ



ಉದಯವಾಹಿನಿ ಚಿತ್ರ

ಮೂರ್ತಿ ಪ್ರತಿಷ್ಠಾಪನೆಗ ಸುಗಮವಾಗಿ ಅನುಮತಿ ನೀಡುವ ಉದ್ದೇಶದಿಂದ ನಗರಸಭ, ಪುರಸಭ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಏಕಗವಾಕ್ಷಿ ವ್ಯವಸ್ಥೆ (ಸಿಂಗಲ್ ವಿಂಡೋ ಸಿಸ್ಟಮ್) ಜಾರಿಗೊಳಿಸಲಾಗುತ್ತಿದೆ. ಆಯೋಜಕರು ಕಡ್ಡಾಯವಾಗಿ ತಮ್ಮ ಆಧಾರ ಕಾರ್ಡ್, ರೇಷನ್ ಕಾರ್ಡ್ ಅಥವಾ ವೋಟರ್ ಕಾರ್ಡ್ ಲಗತ್ತಿಸಿ ಏಕಕಾಲದಲ್ಲಿ ಅನುಮತಿ ಪಡೆಯಬಹುದಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿಷ್ಠಾಪಿಸುವ ಗಣೇಶ ಮೂರ್ತಿಯ ಎತ್ತರವನ್ನು ಗರಿಷ್ಠ 5 ಅಡಿಗಳಿಗ ಮಾತ್ರ ಸೀಮಿತಗೊಳಿಸಲಾಗಿದ್ದು, ಟ್ರಾನ್ಸ್‌ಫಾರ್ಮರ್‌ಗಳ ಬಳಿ, ನೀರಿನ ಟ್ಯಾಂಕ್ ಕೆಳಗಡೆ, ರಸ್ತ ಮಧ್ಯದಲ್ಲಿ ಹಾಗೂ ಯಾವುದೇ ವಿವಾದಿತ ಸ್ಥಳಗಳಲ್ಲಿ ಮೂರ್ತಿ ಪ್ರತಿಷ್ಠಾಪನೆಗ ಅವಕಾಶವಿಲ್ಲ ಎಂದು ಎಚ್ಚರಿಸಿದರು. ಜೊತೆಗ, ಭದ್ರತಾ ದೃಷ್ಟಿಯಿಂದ ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಹಾಗೂ ದಿನದ 24 ಗಂಟೆಯೂ ಆಯೋಜಕರು ತಮ್ಮದೇ ಆದ ಸ್ವಯಂಸೇವಕರನ್ನು ನಿಯೋಜಿಸಿಕೊಳ್ಳುವುದು ಕಡ್ಡಾಯವಾಗಿದೆ.

ಜಲ ಮಾಲಿನ್ಯ ತಡೆಯುವ ನಿಟ್ಟಿನಲ್ಲಿ ರಾಸಾಯನಿಕಯುಕ್ತ ಪಿಒಪಿ ಹಾಗೂ ಪ್ಲಾಸ್ಟಿಕ್ ಗಣೇಶ ಮೂರ್ತಿಗಳ ತಯಾರಿಕೆ, ಮಾರಾಟ ಮತ್ತು ಬಳಕೆಯನ್ನು ಜಿಲ್ಲಯಾದ್ಯಂತ ಸಂಪೂರ್ಣವಾಗಿ ನಿಷೇಧಿಸಲಾಗಿದ್ದು, ಕೇವಲ ಪರಿಸರಕ್ಕ ಪೂರಕವಾದ ಮಣ್ಣಿನ ಮೂರ್ತಿಗಳನ್ನು ಮಾತ್ರ ಪ್ರತಿಷ್ಠಾಪಿಸಬೇಕು.

ಹಬ್ಬದ ಮೆರವಣಿಗಗಳಲ್ಲಿ ಯುವಜನತೆ ಮತ್ತು ಮಕ್ಕಳ ಶ್ರವಣ ಶಕ್ತಿಯ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತಿರುವ ಅತಿ ಹೆಚ್ಚು ಶಬ್ದ ಮಾಡುವ ಡಿಜೆ ಬಳಕೆಗ ಸಂಪೂರ್ಣ ನಿಷೇಧ ಹೇರಲಾಗಿದೆ. ವಿವಾದಗಳಿಗ ಆಸ್ಪದ ನೀಡದಂತೆ, ಸ್ಥಳಯ ಆಡಳಿತದಿಂದ ಕಡ್ಡಾಯವಾಗಿ ಪೂರ್ವಾನುಮತಿ ಪಡೆದ ನಂತರವೇ ಫ್ಲೆಕ್ಸ್ ಹಾಗೂ ಬ್ಯಾನರ್‌ಗಳನ್ನು ಅಳವಡಿಸಬೇಕು ಎಂದು ಸಭಯಲ್ಲಿ ಆಯೋಜಕರಿಗ ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು. ಸಭಯಲ್ಲಿ ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಪ್ರವೀಣ್ ಪಿ. ಬಾಗೇವಾಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕನ್ನಿಕಾ ಸಿಕ್ರಿವಾಲ್, ಕೆಜಿಎಫ್ ಪೊಲೀಸ್ ಅಧೀಕ್ಷಕ ಶಿವಂಷು ರಜಪೂತ, ಅಪರ ಪೊಲೀಸ್ ವರಿಷ್ಠಾಧಿಕಾರಿ ಜಗದೀಶ್, ಅಪರ ಜಿಲ್ಲಾಧಿಕಾರಿ ಎಸ್. ಎಂ. ಮಂಗಳ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು.

> ಜಲಮೂಲಗಳಿಗ ಹಾನಿಯಾಗದಂತೆ ವಿಸರ್ಜನೆಗೂ ಮುನ್ನ ಮೂರ್ತಿಯ ಮೇಲಿರುವ ಹೂವು ಮತ್ತು ಪ್ಲಾಸ್ಟಿಕ್ ಅಲಂಕಾರಿಕ ವಸ್ತುಗಳನ್ನು ಪ್ರತ್ಯೇಕಿಸಿ ಸ್ವಚ್ಛಗೊಳಿಸಬೇಕು ಹಾಗೂ ವಿಸರ್ಜನಾ ಸ್ಥಳಗಳಲ್ಲಿ ಅಗತ್ಯವಾದ ಫೇಡ್ ಲೈಟ್ (ದೀಪದ ವ್ಯವಸ್ಥೆ) ಜೊತೆಗ ಯಾವುದೇ ಅನಾಹುತಗಳನ್ನು ತಪ್ಪಿಸಲು ನುರಿತ ಈಜುಗಾರರನ್ನು ನಿಯೋಜಿಸಲು ಅಧಿಕಾರಿಗಳಿಗ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು. -ಜಿಲ್ಲಾಧಿಕಾರಿಗಳು

### ವಿಸರ್ಜನೆಗ ಅವಕಾಶ ಕಲ್ಪಿಸಿ

ಮೂರ್ತಿ ವಿಸರ್ಜನಾ ಪ್ರಕ್ರಿಯೆಯನ್ನು ಭದ್ರತೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಸಂಜೆ 6 ಗಂಟೆಯೊಳಗ, ಅಂದರ ಸೂರ್ಯಾಸ್ತಕ್ಕೂ ಮುನ್ನವೇ ಕಡ್ಡಾಯವಾಗಿ ಪೂರ್ಣಗೊಳಿಸ ಬೇಕು. ಪ್ರಸ್ತುತ ಮಳಯ ಕೊರತೆಯಿರುವುದರಿಂದ, ಸ್ಥಳಯ ಆಡಳಿತ ಸೂಚಿಸಿದ ಅಥವಾ ನೀರಿನ ಲಭ್ಯತೆ ಇದೆಯೋ ಅಲ್ಲಿ ಮಾತ್ರ ಮೂರ್ತಿ ವಿಸರ್ಜನೆಗ ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ.

# ಜಿಟಿಡಿಗೆ ಕೋಲಾರ ಸಹಕಾರ ಒಕ್ಕೂಟದ ಅಭಿನಂದನೆ

• ಉದಯವಾಹಿನಿ, ಕೋಲಾರ

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ ನಿಯಮಿತ ಬೆಂಗಳೂರು ಇದರ ಅಧ್ಯಕ್ಷರಾಗಿ ಆಯ್ಕೆಯಾದ ಮಾಜಿ ಸಚಿವರೂ ಆದ ಜಿ.ಟಿ. ದೇವೇಗೌಡ ಹಾಗೂ ಉಪಾಧ್ಯಕ್ಷ ಶಿವಕುಮಾರ್ ಅವರನ್ನು ಕೋಲಾರ ಜಿಲ್ಲಾ ಸಹಕಾರ ಒಕ್ಕೂಟದ ವತಿಯಿಂದ ಎಲ್ಲಾ ನಿರ್ದೇಶಕರು ಹಾಜರಿದ್ದು ಸನ್ಮಾನಿಸಿ ಗೌರವಿಸಿದರು.

ಜಿಲ್ಲಾ ಸಹಕಾರಿ ಯೂನಿಯನ್ ವತಿಯಿಂದ ಮಹಾಮಂಡಳದ ಅಧ್ಯಕ್ಷರನ್ನು ಸನ್ಮಾನಿಸಲು ಇಡೀ ಒಕ್ಕೂಟದ ಎಲ್ಲಾ ನಿರ್ದೇಶಕರು ತೆರಳಿದ್ದು, ಇದೇ ಸಂದರ್ಭದಲ್ಲಿ ಅಧ್ಯಕ್ಷರಿಗೆ ಮನವಿ ಸಲ್ಲಿಸಿ ಸಹಕಾರ ರಂಗದಿಂದಾಗುವ ಆರ್ಥಿಕ ಸಬಲೀಕರಣ, ಸಹಕಾರ ಸಂಘಗಳನ್ನು ಮುನ್ನಡೆಸಲು ಅಗತ್ಯವಾದ ಕಾನೂನುಗಳ ಪರಿಚಯ ಮತ್ತಿತರ ಅಂಶಗಳ ಕುರಿತು ಜಿಲ್ಲೆಯ ಸಹಕಾರಿ ಸಂಸ್ಥೆಗಳ ನೌಕರರು, ಕಾರ್ಯದರ್ಶಿಗಳಿಗೆ ಅರಿವು ಮೂಡಿಸಲು ಯೂನಿಯನ್‌ಹೆಚ್ಚಿನ ಅನುದಾನದ ಅಗತ್ಯವಿದ್ದು, ಒದಗಿಸಿಕೊಡಲು ಕೋರಿದರು.

ಸಹಕಾರ ಒಕ್ಕೂಟ ಕೋಲಾರ ಜಿಲ್ಲೆಯಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಸೊಸೈಟಿಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು, ಎಸ್‌ಎಫ್‌ಸಿಎಸ್‌ಗಳು ಸೇರಿದಂತೆ ವಿವಿಧ ಮಾದರಿಯ ಸಹಕಾರ ಸಂಘಗಳ ಕಾರ್ಯದರ್ಶಿಗಳು, ನೌಕರರಿಗೆ ಅಗತ್ಯವಾದ ತರಬೇತಿ, ಮಾಹಿತಿ ಒದಗಿಸುವಲ್ಲಿ ಮುಖ್ಯಪಾತ್ರ ವಹಿಸಿದೆ ಎಂದು ತಿಳಿಸಿದರು.

ಕೋಲಾರ ಜಿಲ್ಲಾ ಯೂನಿಯನ್ ಈಗಾಗಲೇ ಸಹಕಾರ ಶಿಕ್ಷಣ ಮತ್ತು ತರಬೇತಿ, ಸಹಕಾರಿ ಸಂಘಗಳ ಸದಸ್ಯರು, ನಿರ್ದೇಶಕರು ಮತ್ತು ಸಿಬ್ಬಂದಿಗೆ ಸಹಕಾರ ತತ್ವಗಳು ಮತ್ತು ನಿರ್ವಹಣೆಯ ಬಗ್ಗೆ ತರಬೇತಿ ಶಿಬಿರ ನಡೆಸುವುದು ಸೇರಿದಂತೆ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಿ ಸಹಕಾರ ರಂಗವನ್ನು ಬಲಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ ಎಂದರು.

# ದೇವರ ಹಿಪ್ಪರಗಿ ತಾಲ್ಲೂಕನ್ನು ಬರಗಾಲ ತಾಲ್ಲೂಕೆಂದು ಘೋಷಿಸಲು ಆಗ್ರಹ

## ಕೃಷಿಯನ್ನೇ ನಂಬಿಕೊಂಡಿರುವ ಸಾವಿರಾರು ಕುಟುಂಬಗಳ ಬದುಕು ಮಳೆಯ ಮೇಲೆ ಅವಲಂಬಿತವಾಗಿದೆ

• **ಉದಯವಾಹಿನಿ ದೇವರ ಹಿಪ್ಪರಗಿ:**

ಆಕಾಶದತ್ತ ಮುಖ ಮಾಡಿ ಮಳೆಗಾಗಿ ಕಾಯುತ್ತಿದ್ದ ರೈತನ ನಿರೀಕ್ಷೆ ಹುಸಿಯಾಗಿದೆ. ಮಳೆಯ ಕೊರತೆ, ಮಣ್ಣಿನಲ್ಲಿ ತೇವಾಂಶದ ಅಭಾವ ಹಾಗೂ ಕೃಷಿ ಬೆಳೆಗಳ ಮೇಲಿನ ಪ್ರತಿಕೂಲ ಪರಿಣಾಮದಿಂದ ವಿಜಯಪೂರ ಜಿಲ್ಲೆಯ ದೇವರ ಹಿಪ್ಪರಗಿ ತಾಲ್ಲೂಕಿನ ಗ್ರಾಮೀಣ ಜನತೆಯ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಆದರೆ ಹೊಲದಲ್ಲಿ ಕಾಣುತ್ತಿರುವ ಬರದ ವಾಸ್ತವ ಮತ್ತು ಸರ್ಕಾರದ ಕಡತಗಳಲ್ಲಿ ದಾಖಲಾಗುವ ಅಂಕಿ-ಅಂಶಗಳ ನಡುವೆ ವ್ಯತ್ಯಾಸವಿದೆಯೇ?

**1 : ರೈತ ಏನೋ ಬೀಜ ಬಿತ್ತಿದ್ದಾನೆ**
**2 : ಆದರೆ ಆಕಾಶ ಮಳೆ ಬಿತ್ತುತ್ತಿಲ್ಲ**
**3 : ಕುರ್ಚಿಯಿಂದ ಬರ ಕಾಣುವುದಿಲ್ಲ**

ಎಂಬ ಪ್ರಶ್ನೆ ಇದೀಗ ತಾಲ್ಲೂಕಿನ ರೈತರನ್ನು ಕಾಡುತ್ತಿದೆ.

ಕೃಷಿಯನ್ನೇ ನಂಬಿಕೊಂಡಿರುವ ಸಾವಿರಾರು ಕುಟುಂಬಗಳ ಬದುಕು ಮಳೆಯ ಮೇಲೆ ಅವಲಂಬಿತವಾಗಿದೆ. ಸಮಯಕ್ಕೆ ಸರಿಯಾಗಿ ಮಳೆಯಾಗದೆ ಹೋದ ಪರಿಣಾಮ ಬಿತ್ತನೆ ಮಾಡಿದ ರೈತರು ಆತಂಕಕ್ಕೆ ಒಳಗಾಗಿದ್ದಾರೆ. ಕೆಲವೆಡೆ ಬೆಳೆ ಮೊಳಕೆಯೊಡೆಯುವ ಮುನ್ನವೇ ಮಣ್ಣು ಒಣಗಿದ್ದರೆ, ಮತ್ತೊಂದೆಡೆ ಮೊಳಕೆಯೊಡೆದ ಬೆಳೆ ಮಳೆಯಿಲ್ಲದೆ ಬಾಡುವ ಸ್ಥಿತಿ ನಿರ್ಮಾಣವಾಗಿದೆ.

ಇದರಿಂದ ರೈತರು ಬೀಜ, ರಸಗೊಬ್ಬರ, ಔಷಧಿ ಹಾಗೂ ಕೃಷಿ ಕೂಲಿ ಸೇರಿದಂತೆ ಮಾಡಿರುವ ಹೂಡಿಕೆ ಕೈತಪ್ಪುವ ಭೀತಿಯಲ್ಲಿದ್ದಾರೆ. ಸಾಲ ಮಾಡಿ ಕೃಷಿ ನಡೆಸಿರುವ ರೈತರ ಸಂಕಷ್ಟ ಮತ್ತಷ್ಟು ಗಂಭೀರವಾಗಿದೆ.


ಉದಯವಾಹಿನಿ ಚಿತ್ರ

> ಸಮೀಕ್ಷೆಯ ವರದಿಯನ್ನು ಸಾರ್ವಜನಿಕಗೊಳಿಸಿ, ಅದರ ಆಧಾರದ ಮೇಲೆ ದೇವರ ಹಿಪ್ಪರಗಿ ತಾಲ್ಲೂಕನ್ನು ಬರಗಾಲ ತಾಲ್ಲೂಕೆಂದು ಘೋಷಿಸಬೇಕು ಎಂಬುದು ರೈತರು ಹಾಗೂ ಸಾರ್ವಜನಿಕರ ಪ್ರಮುಖ

> ದೇವರ ಹಿಪ್ಪರಗಿ ತಾಲ್ಲೂಕಿನ ರೈತರು ಸರ್ಕಾರದ ಮುಂದೆ ಕೇವಲ ಮನವಿ ಮಾಡುತ್ತಿಲ್ಲ. ತಮ್ಮ ಬದುಕಿನ ವಾಸ್ತವವನ್ನು ಸರ್ಕಾರ ಗುರುತಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ. -ರೈತರು

ಬರದ ವಾಸ್ತವ ಅರಿಯಬೇಕಾದರೆ ಅಧಿಕಾರಿಗಳು ಕಚೇರಿಯಲ್ಲಿನ ವರದಿಗಳನ್ನು ಮಾತ್ರ ನೋಡದೆ ಗ್ರಾಮಗಳ ಹೊಲಗಳಿಗೆ ಇಳಿಯಬೇಕು.ರೈತನ ಜಮೀನಿನಲ್ಲಿ ನಿಂತು ಮಣ್ಣನ್ನು ಕೈಯಲ್ಲಿ ಹಿಡಿದು ನೋಡಬೇಕು. ಬಿತ್ತನೆಯ ಸ್ಥಿತಿ, ಬೆಳೆಗಳ ಸ್ಥಿತಿ, ಜಲಮೂಲಗಳ ಪರಿಸ್ಥಿತಿ ಹಾಗೂ ರೈತರ ಆರ್ಥಿಕ ನಷ್ಟವನ್ನು ನೇರವಾಗಿ ಪರಿಶೀಲಿಸಬೇಕು. ಕಾಗದದ ಅಂಕಿ-ಅಂಶಗಳಿಂದ ರೈತನ ಹೊಟ್ಟೆ ತುಂಬುವುದಿಲ್ಲ, ಹೊಲದ ವಾಸ್ತವವೇ ಬರದ ನಿಜವಾದ ಮಾಪಕವಾಗಬೇಕು.

ದೇವರ ಹಿಪ್ಪರಗಿ ತಾಲ್ಲೂಕು ಕೃಷಿ ಪ್ರಧಾನ ಪ್ರದೇಶವಾಗಿದ್ದು, ಮಳೆ ಕೈಕೊಟ್ಟರೆ ಅದರ ಹೊಡೆತ ನೇರವಾಗಿ ರೈತನ ಕುಟುಂಬದ ಮೇಲೆ ಬೀಳುತ್ತದೆ. ಬೆಳೆ ಹಾನಿಯಾದರೆ ಕೃಷಿ ಕಾರ್ಮಿಕರಿಗೆ ಕೆಲಸ ಕಡಿಮೆಯಾಗುತ್ತದೆ. ಗ್ರಾಮೀಣ ಮಾರುಕಟ್ಟೆಯಲ್ಲಿ ವ್ಯಾಪಾರ ಕುಸಿಯುತ್ತದೆ. ಹೈನುಗಾರಿಕೆ ಹಾಗೂ ಜಾನುವಾರು ಸಾಕಾಣಿಕೆಯ ಮೇಲೂ ಪರಿಣಾಮ ಬೀರುತ್ತದೆ. ಹೀಗಿರುವಾಗ ಬರದ ಪರಿಣಾಮವನ್ನು ಕೇವಲ ಮಳೆಯ ಪ್ರಮಾಣದಿಂದ ಅಳೆಯುವುದು ಎಷ್ಟು ಸಮಂಜಸ? ಎಂಬ ಪ್ರಶ್ನೆ ಉದ್ಭವಿಸಿದೆ.

> ಬರವೆಂದರೆ ಒಣಗಿದ ಹೊಲ, ಸಾಲದ ಭಾರ, ಕುಸಿದ ಆದಾಯ, ಕೆಲಸಕ್ಕಾಗಿ ಅಲೆದಾಡುವ ಕೂಲಿ ಕಾರ್ಮಿಕ, ನೀರಿಗಾಗಿ ಪರದಾಡುವ ಜನ ಮತ್ತು ಭವಿಷ್ಯದ ಬಗ್ಗೆ ಆತಂಕಗೊಂಡಿರುವ ರೈತ ಕುಟುಂಬ.

ಸರ್ಕಾರ ತಕ್ಷಣ ದೇವರ ಹಿಪ್ಪರಗಿ ತಾಲ್ಲೂಕಿನಾದ್ಯಂತ ಸಮಗ್ರ ಬರ ಸಮೀಕ್ಷೆ ನಡೆಸಬೇಕು. ಪ್ರತಿಯೊಂದು ಗ್ರಾಮದಲ್ಲಿ ಮಳೆ ಪ್ರಮಾಣ, ಬಿತ್ತನೆ ಪ್ರದೇಶ, ಬೆಳೆಗಳ ಸ್ಥಿತಿ, ಬೆಳೆ ಹಾನಿ, ಜಲಮೂಲಗಳ ಲಭ್ಯತೆ, ಅಂತರ್ಜಲ ಮಟ್ಟ ಹಾಗೂ ಜಾನುವಾರುಗಳಿಗೆ ಮೇವು-ನೀರಿನ ಪರಿಸ್ಥಿತಿಯನ್ನು ಪರಿಶೀಲಿಸಬೇಕು.

ಬರಗಾಲ ಘೋಷಣೆಯಾದ ಬಳಿಕ ಸರ್ಕಾರದ ನಿಯಮಾನುಸಾರ ರೈತರಿಗೆ ದೊರೆಯಬೇಕಾದ ಪರಿಹಾರ, ಬೆಳೆ ನಷ್ಟ ಪರಿಹಾರ, ಕುಡಿಯುವ ನೀರಿನ ವ್ಯವಸ್ಥೆ, ಜಾನುವಾರುಗಳಿಗೆ ಮೇವು ಹಾಗೂ ಉದ್ಯೋಗದಂತಹ ಪರಿಹಾರ ಕ್ರಮಗಳು ತಕ್ಷಣ ಜಾರಿಯಾಗಬೇಕು. ಬರದ ಹೆಸರಿನಲ್ಲಿ ಸಮೀಕ್ಷೆ ನಡೆಸಿ ಕಡತ ಮುಚ್ಚುವ ಕೆಲಸವಾಗಬಾರದು. ಸಮೀಕ್ಷೆಯ ಫಲ ರೈತನ ಬದುಕಿನಲ್ಲಿ ಕಾಣಬೇಕು. ಪರಿಹಾರದ ಹಣ ನಿಜವಾದ ಅರ್ಹ ಫಲಾನುಭವಿಯ ಕೈಗೆ ತಲುಪಬೇಕು.

ಸರ್ಕಾರ ಇನ್ನೂ ಕಣ್ಣುಮುಚ್ಚಿ ಕುಳಿತರೆ, ಬರ ಕೇವಲ ಹೊಲಗಳಲ್ಲಿ ಉಳಿಯುವುದಿಲ್ಲ-ರೈತನ ಮನೆಯ ಬಾಗಿಲಿಗೂ, ಗ್ರಾಮೀಣ ಆರ್ಥಿಕತೆಯ ನರನಾಡಿಗೂ ತಲುಪಲಿದೆ.


ಆದ್ದರಿಂದ ಸರ್ಕಾರ ತಕ್ಷಣ ದೇವರ ಹಿಪ್ಪರಗಿ ತಾಲ್ಲೂಕಿನಲ್ಲಿ ಸಮಗ್ರ ಬರ ಸಮೀಕ್ಷೆ ನಡೆಸಿ, ವಾಸ್ತವ ಪರಿಸ್ಥಿತಿಯನ್ನು ಆಧರಿಸಿ ತಾಲ್ಲೂಕನ್ನು ಬರಗಾಲ ತಾಲ್ಲೂಕೆಂದು ಘೋಷಿಸಿ, ರೈತರಿಗೆ ಸಮರ್ಪಕ ಪರಿಹಾರ ಒದಗಿಸಬೇಕು.

# ಮೃತ ಮೀನುಗಾರ ಹಣಮಂತನ ಕುಟುಂಬಕ್ಕೆ 10 ಲಕ್ಷ ಪರಿಹಾರ

• **ಉದಯವಾಹಿನಿ ಯಾದಗಿರಿ:**

ಮೀನು ಹಿಡಿಯಲು ತೆರಳಿದ್ದ ವೇಳೆ ರಭಸದ ಗಾಳಿಗೆ ಮೀನಿನ ಬಲೆ ಸಿಲುಕಿ ಮೃತಪಟ್ಟ ತಳಕ ಗ್ರಾಮದ ಮೀನುಗಾರ ಹಣಮಂತ ಅವರ ಕುಟುಂಬಕ್ಕೆ ಸರ್ಕಾರದಿಂದ ಮಂಜೂರಾದ 10 ಲಕ್ಷ ಪರಿಹಾರದ ಚೆಕ್‌ನ್ನು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು ಮಂಗಳವಾರ ವಿತರಿಸಿದರು. 'ಸರ್ಕಾರ ನೀಡಿರುವ ಪರಿಹಾರದ ಹಣವನ್ನು ಕುಟುಂಬದ ಭವಿಷ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ಬಳಸಿಕೊಳ್ಳಬೇಕು. ಹೊಲ ಖರೀದಿಸಿ ಕೃಷಿ ಮಾಡುವುದು, ಸಣ್ಣ ವ್ಯವಹಾರ ಆರಂಭಿಸುವುದು ಅಥವಾ ಬ್ಯಾಂಕ್‌ನಲ್ಲಿ ಠೇವಣಿ ಇಡುವ ಮೂಲಕ ಹಣವನ್ನು ಸುರಕ್ಷಿತವಾಗಿ ಬಳಸಿಕೊಳ್ಳಿ.

ಅನಗತ್ಯವಾಗಿ ಹಣವನ್ನು ಖರ್ಚು ಮಾಡಿ ಹಾಳು ಮಾಡಿಕೊಳ್ಳಬೇಡಿ' ಎಂದು ಶಾಸಕರು ಸಲಹೆ ನೀಡಿದರು. ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಶರಣಬಸವ


ಉದಯವಾಹಿನಿ ಚಿತ್ರ

> ಗ್ರಾಮದಲ್ಲಿ ಮೀನುಗಾರಿಕೆ ಇಲಾಖೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೃತ ಹಣಮಂತ ಅವರ ತಂದೆ ಚಂದಪ್ಪ ಅವರಿಗೆ ಶಾಸಕ ತುನ್ನೂರು ಪರಿಹಾರದ ಚೆಕ್ ಹಸ್ತಾಂತರಿಸಿದರು.

ಮಾತನಾಡಿ, ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು ಹಾಗೂ ಸಾಮಾಜಿಕ ಕಾರ್ಯಕರ್ತ ಉಮೇಶ ಮುದ್ನಾಳ ಅವರ ಪ್ರಯತ್ನ ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳ ಸಹಕಾರದಿಂದ ಪರಿಹಾರ ದೊರಕಿದೆ. ಕುಟುಂಬಕ್ಕೆ ಬಂದಿರುವ ಹಣವನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಮೀನುಗಾರಿಕೆಗೆ ತೆರಳುವಾಗ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ಅಖಿಲ ಭಾರತ ಕೋಲಿ ಸಮಾಜದ ರಾಜ್ಯ ಕಾರ್ಯದರ್ಶಿ ಉಮೇಶ ಮುದ್ನಾಳ ಮಾತನಾಡಿ, ಬಡ ಕುಟುಂಬದ ಹಣಮಂತ ಅವರ ಅಕಾಲಿಕ ಸಾವು ಎಲ್ಲರಿಗೂ ನೋವು ತಂದಿದೆ. ಘಟನೆ ನಡೆದ ಕೂಡಲೇ ಶಾಸಕರು ಹಾಗೂ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ವಿಷಯ ತಂದು ಪರಿಹಾರ ದೊರಕಿಸುವ ಪ್ರಯತ್ನ ಮಾಡಲಾಗಿತ್ತು. ಎಲ್ಲರ ಸಹಕಾರದಿಂದ ಕುಟುಂಬಕ್ಕೆ ಸರ್ಕಾರದ ಪರಿಹಾರ ಸಿಕ್ಕಿದೆ. ಕೇಂದ್ರ ಸರ್ಕಾರದಿಂದಲೂ ಪರಿಹಾರ ದೊರಕಿಸಿಕೊಡುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

# ಮಹಾಲಿಂಗೇಶ್ವರ ಸೇವೆ-ದೇವರ ಮಣ್ಣು ದೇವರಿಗೆ ಇಷ್ಟೇ ನಮ್ಮ ಉದ್ದೇಶ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಪುತ್ತೂರು**

ಇತಿಹಾಸ ಪ್ರಸಿದ್ಧ ಪುತ್ತೂರು ಮಹಾಲಿಂಗೇಶ್ವರ ದೇವಳದಲ್ಲಿ ಮುಂದಿನ 10 ದಿನಗಳೊಳಗೆ 5 ಪ್ರಮುಖ ಕಾಮಗಾರಿಗಳಿಗೆ ಏಕಕಾಲದಲ್ಲಿ ಚಾಲನೆ ನೀಡಲಾಗುವುದು. ದೇವಳದ ಹೊರಾಂಗಣ, ಹಾಲ್ ಮತ್ತು ವಾಶ್‌ರೂಮ್‌ಗಳಿಗೆ ರೂ.3.5 ಕೋಟಿ ವೆಚ್ಚದಲ್ಲಿ ಗ್ರಾನೈಟ್ ಅಳವಡಿಕೆ ಮಾಡಲಾಗುವುದು. 25 ಸಾವಿರ ಭಕ್ತರಿಗೆ ಊಟ ನೀಡುವ ಅನ್ನಛತ್ರ ನಿರ್ಮಾಣ ಹಾಗೂ ರೂ.15 ಕೋಟಿ ವೆಚ್ಚದ ವಾಣಿಜ್ಯ ಸಂಕೀರ್ಣ ನಿರ್ಮಾಣದ ಮೂಲಕ ದೇವಳದ ಸಮಗ್ರ ಅಭಿವೃದ್ಧಿಗೆ ವೇಗ ನೀಡಲಾಗುವುದು ಎಂದು ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾದ ಶಾಸಕ ಅಶೋಕ್ ರೈ ತಿಳಿಸಿದರು.

> ವಿಐಪಿ ಲಾಂಜ್, ಶೌಚಾಲಯ ನಿರ್ಮಾಣ ಕಾಮಗಾರಿಗಳಿಗೆ ಸುಮಾರು ರೂ.50 ವೆಚ್ಚವಾಗಬಹುದು. ಇದಕ್ಕೆ ದಾನಿಗಳ ಹಾಗೂ ಭಕ್ತರ ನೆರವಿಗೆ ಅವರು ವಿನಂತಿಸಿದರು.

ಮಂಗಳವಾರ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಅಭಿವೃದ್ಧಿ ಕಾರ್ಯಗಳ ಬಗ್ಗೆ ವ್ಯವಸ್ಥಾಪನಾ ಸಮಿತಿ ಹಾಗೂ ಇಂಜಿನಿಯರ್‌ಗಳ ಸಭೆ ನಡೆಸಿ ಮಾಧ್ಯಮದೊಂದಿಗೆ ಅವರು ಮಾತನಾಡಿದರು.

ತಂತ್ರಿಗಳು ಮತ್ತು ವಿಶೇಷ ಅತಿಥಿಗಳಿಗಾಗಿ 6 ಕೊಠಡಿಗಳ ತಾತ್ಕಾಲಿಕ ವ್ಯವಸ್ಥೆ, ಶೌಚಾಲಯ, ಭೋಜನಶಾಲಾ ವಿಸ್ತರಣೆ, ವಿಐಪಿ ಲಾಂಜ್, ರಥಮಂದಿರ, ಸಭಾಂಗಣ ಸೇರಿದಂತೆ ಪ್ರಮುಖ ಕಾಮಗಾರಿಗಳಿಗೆ ಕೊಟೇಶನ್ ಕರೆದು 7 ದಿನಗಳ ಕಾಲಾವಕಾಶ ನೀಡಿ ಗುತ್ತಿಗೆದಾರರನ್ನು ಅಂತಿಮಗೊಳಿಸಲಾಗುವುದು. ಇದರಲ್ಲಿ ಪ್ರಮುಖ 5 ಕಾಮಗಾರಿಗಳಿಗೆ ಪ್ರತ್ಯೇಕ ಗುತ್ತಿಗೆದಾರರು ನೇಮಕವಾಗಲಿದ್ದಾರೆ ಎಂದು ಅವರು ತಿಳಿಸಿದರು.

ದೇವಳದ ಅನ್ನಛತ್ರವನ್ನು ಮತ್ತಷ್ಟು ವಿಸ್ತರಿಸುವ ಮೂಲಕ 25 ಸಾವಿರ ಮಂದಿಗೆ ಊಟ ಕೊಡುವ ಸಾಮರ್ಥ್ಯ ಕಲ್ಪಿಸುವ ಚಿಂತನೆ ನಡೆಸಲಾಗಿದೆ. ಇದು 25 ವರ್ಷಗಳ ಕನಸನ್ನು ಈ ಬಾರಿ ಸಾಕಾರಗೊಳಿಸುವ ಪ್ರಯತ್ನ ನಡೆಸಲಾಗುತ್ತಿದೆ.

# ಕಸ್ತೂರಿ ರಂಗನ್ ವರದಿ ಜಾರಿ ವಿರುದ್ಧ ಪಕ್ಷಾತೀತ ಹೋರಾಟ: ಶಿರಾಡಿ

• **ಉದಯವಾಹಿನಿ, ಉಪ್ಪಿನಂಗಡಿ :**

ಮಲೆನಾಡು ಜನಹಿತ ರಕ್ಷಣಾ ವೇದಿಕೆ ದಕ್ಷಿಣ ಕನ್ನಡ ಇದರ ಆಶ್ರಯದಲ್ಲಿ ಕಸ್ತೂರಿ ರಂಗನ್ ವರದಿ ಜಾರಿ ವಿರುದ್ಧ ಗ್ರಾಮಸ್ಥರ ಪ್ರತಿಭಟನೆ ಗೋಳಿತೊಟ್ಟು ಗ್ರಾಮ ಪಂಚಾಯಿತಿ ಮುಂಭಾಗದಲ್ಲಿ ನಡೆಯಿತು. ಪ್ರತಿಭಟನಾ



ಉದಯವಾಹಿನಿ ಚಿತ್ರ

ಸಭೆ ಉದ್ದೇಶಿಸಿ ಮಾತನಾಡಿದ ಮಲೆನಾಡು ಜನಹಿತ ರಕ್ಷಣಾ ವೇದಿಕೆ ಸಂಚಾಲಕ ಕಿಶೋರ್ ಶಿರಾಡಿ ಮಾತನಾಡಿ , ಕಸ್ತೂರಿ ರಂಗನ್ ವರದಿ ಜಾರಿ ವಿರುದ್ಧ ಪಕ್ಷಾತೀತವಾಗಿ ಹೋರಾಟ ನಡೆಯುತ್ತಿದೆ. ಇದೊಂದು ಗಂಭೀರ ವಿಚಾರವಾಗಿದ್ದು ಪಶ್ಚಿಮ ಘಟ್ಟ ಪ್ರದೇಶ ಸೂಕ್ಷ್ಮ ವಲಯ ಎಂದು ಘೋಷಣೆಯಾದಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಅಡ್ಡಿಯಾಗಲಿದೆ. ರಸ್ತೆ ಸಂಚಾರವೂ ಬಂದ್ ಆಗುವುದರಿಂದ ಕುಗ್ರಾಮವಾಗಲಿದೆ. ಇದಕ್ಕೆ ಶಾಶ್ವತ ಪರಿಹಾರ ಸಿಗಬೇಕೆಂಬ ನಿಟ್ಟಿನಲ್ಲಿ ಈ ಸಲ ಹೋರಾಟ ಮಾಡಲಾಗುತ್ತಿದೆ ಎಂದು ಹೇಳಿದರು.

> ಅವರು ಬಾರದೇ ಇದ್ದಲ್ಲಿ ಜೈಲ್ ಭರೋ ಚಳವಳಿ ನಡೆಸಲಾಗುವುದು ಎಂದು ಎಚ್ಚರಿಸಿದರು. ಈ ನಿಟ್ಟಿನಲ್ಲಿ ಇದೊಂದು ರೈತ ಚಳವಳಿ ಆಗುವ ನಿಟ್ಟನಲ್ಲಿ ಎಲ್ಲರೂ ಕೈ ಜೋಡಿಸಬೇಕು ಎಂದರು.

ಕಸ್ತೂರಿ ರಂಗನ್ ವರದಿ ಜಾರಿ ಬೇಡ ಎಂದು ಈ ಭಾಗದ ಶಾಸಕರು ವಿಧಾನಸಭೆ ಅಧಿವೇಶನದಲ್ಲಿ ಸರ್ಕಾರವನ್ನು ಒತ್ತಾಯಿಸಬೇಕು. ಪಶ್ಚಿಮ ಘಟ್ಟ ಪ್ರದೇಶ ವ್ಯಾಪ್ತಿಯ ದಿಡುಪೆಯಿಂದ ಮಡಪ್ಪಾಡಿ ತನಕ ಗಡಿ ಗುರುತು ಮಾಡಿ ಪಶ್ಚಿಮ ಘಟ್ಟ ಹಾಗೂ ಜನವಸತಿ ಪ್ರದೇಶ ಪ್ರತ್ಯೇಕಗೊಳಿಸಬೇಕು.

ಯೋಜನೆ ವಿರುದ್ಧ ಈ ತಿಂಗಳ ಕೊನೆಯಲ್ಲಿ ಕಡಬದಲ್ಲಿ ದೊಡ್ಡ ಮಟ್ಟದ ಹೋರಾಟ ನಡೆಯಲಿದೆ. ಮುಂದೆ ಜನವರಿ ತಿಂಗಳಲ್ಲಿ ಸಹಾಯಕ ಆಯುಕ್ತರ ಕಚೇರಿ ಚಲೋ ಹಾಗೂ ಆ ಬಳಿಕ ಗುಂಡ್ಯದಲ್ಲಿ ಪ್ರತಿಭಟನೆ ನಡೆಸಲಾಗುವುದು. ಇಲ್ಲಿಗೆ ಉಸ್ತುವಾರಿ ಸಚಿವರು, ಸಂಸದರು, ಶಾಸಕರು, ಸರಕಾರದ ಮುಖ್ಯ ಕಾರ್ಯದರ್ಶಿಗಳು ಬಂದು ಮನವಿ ಸ್ವೀಕರಿಸಬೇಕು.

# ಲಾಧಾ ಗ್ರಾಪಂನಲ್ಲಿ ಜಾಬ್ ಕಾರ್ಡ್ ಮೇಳಕ್ಕೆ ಚಾಲನೆ

• **ಉದಯವಾಹಿನಿ, ಔರಾದ್:**

ತಾಲ್ಲೂಕಿನ ಲಾಧಾ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಿಬಿ-ಜಿ ರಾಮ್‌ಜಿ ಯೋಜನೆಯಡಿ ಹಮ್ಮಿಕೊಂಡಿದ್ದ ಜಾಬ್ ಕಾರ್ಡ್ ಮೇಳಕ್ಕೆ ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ ಅವರು ಚಾಲನೆ ನೀಡಿದರು.

ಕಾರ್ಯಕ್ರಮ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಕೂಲಿ ಕಾರ್ಮಿಕರಿಗೆ ಸ್ಥಳೀಯವಾಗಿಯೇ ಉದ್ಯೋಗಾವಕಾಶ ಕಲ್ಪಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಆದ್ದರಿಂದ ಅರ್ಹ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಕ್ಕೆ ಬೇಡಿಕೆ ಸಲ್ಲಿಸಿ, ಸರ್ಕಾರದ ಉದ್ಯೋಗ ಖಾತರಿಯ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು. ತಾ.ಪಂ ಸಹಾಯಕ ನಿರ್ದೇಶಕ (ಗ್ರಾ.ಉ) ಶಿವಕುಮಾರ ಘಾಟೆ ಮಾತನಾಡಿ, ವಿಬಿ-ಜಿ ರಾಮ್‌ಜಿ ಯೋಜನೆಯಡಿ ವಾರ್ಷಿಕ ಉದ್ಯೋಗದ ದಿನಗಳನ್ನು 100ರಿಂದ 125 ದಿನಗಳಿಗೆ ಹೆಚ್ಚಿಸಲಾಗಿದೆ. ಪ್ರತಿ ದಿನ ರೂ.382 ಕೂಲಿ ನೀಡಲಾಗುತ್ತಿದ್ದು, ಒಂದು ಕುಟುಂಬವು ಗರಿಷ್ಠ 125 ದಿನಗಳ ಉದ್ಯೋಗ ಪಡೆದರೆ ರೂ.47,750 ವರೆಗೆ ಕೂಲಿ ಪಡೆಯಬಹುದಾಗಿದೆ ಎಂದು ಮಾಹಿತಿ ನೀಡಿದರು.

> **ವಿಬಿ-ಜಿ ರಾಮ್‌ಜಿ ಯೋಜನೆಯಡಿ ಜಾಬ್ ಕಾರ್ಡ್**

ಇದೇ ವೇಳೆ ಜಾಬ್ ಕಾರ್ಡ್ ಮೇಳದ


ಉದಯವಾಹಿನಿ ಚಿತ್ರ

ಮೂಲಕ ಹೊಸ ಜಾಬ್ ಕಾರ್ಡ್ ಪಡೆಯಲು ಅರ್ಹರಿಂದ ಅರ್ಜಿ ಸ್ವೀಕರಿಸುವುದು, ಜಾಬ್ ಕಾರ್ಡ್‌ಗಳಲ್ಲಿನ ವಿವರಗಳನ್ನು ಪರಿಶೀಲಿಸಿ ಅಗತ್ಯ ತಿದ್ದುಪಡಿ ಮಾಡುವುದು. ಯೋಜನೆಯಡಿ ಲಭ್ಯವಿರುವ ಉದ್ಯೋಗಾವಕಾಶಗಳ ಕುರಿತು ಗ್ರಾಮಸ್ಥರಿಗೆ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅನಿಲಕುಮಾರ, ಸಂಜುಕುಮಾರ, ಶಿವಕಾಂತ, ಸುಭಾಷ್, ಪ್ರದೀಪ ಮಿಠಾರೆ, ತುಕಾರಾಮ ಹಸನ್ಮುಖಿ, ಸಂತೋಷ, ಕಲಾವತಿ, ಎನ್‌ಆರ್‌ಎಲ್‌ಎಂ ಸಿಬ್ಬಂದಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಸಿಯುಕೆ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್‌ಗೆ ತೆರೆ

• **ಉದಯವಾಹಿನಿ, ಕಲಬುರಗಿ,:**

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಕಂಪ್ಯೂಟರ್ ವಿಜ್ಞಾನ ನಿಕಾಯದ ವತಿಯಿಂದ ಆಯೋಜಿಸಲಾಗಿದ್ದ ವಿಶ್ವವಿದ್ಯಾಲಯ ಮಟ್ಟದ ಆಂತರಿಕ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್-2026 ಯಶಸ್ವಿಯಾಗಿ ಮುಕ್ತಾಯವಾಯಿತು.

ಆಂತರಿಕ ಹ್ಯಾಕಥಾನ್‌ಗೆ ವಿ.ವಿ.ಯ ಒಟ್ಟು 55 ತಂಡಗಳು ನೋಂದಾಯಿಸಿಕೊಂಡಿದ್ದು, ಕಂಪ್ಯೂಟರ್ ವಿಜ್ಞಾನ, ಎಂಸಿಎ, ಗಣಿತ ಮತ್ತು ಕಂಪ್ಯೂಟಿಂಗ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್, ಎಲೆಕ್ಟ್ರಿಕಲ್ ಎಂಜಿನಿಯರಿಂಗ್, ಜೆನೆಟಿಕ್ಸ್ ಮತ್ತು ಜೀನೋಮಿಕ್ಸ್ ಹಾಗೂ ಸ್ಟ್ಯಾಟಿಸ್ಟಿಕ್ಸ್ ಮತ್ತು ಡೇಟಾ ಅನಾಲಿಟಿಕ್ಸ್ ವಿಭಾಗಗಳ ಸುಮಾರು 246 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮೌಲ್ಯಮಾಪನದ ಬಳಿಕ, ವಿವಿಧ ಸಮಸ್ಯೆ ಹೇಳಿಕೆಗಳು ಮತ್ತು ವಿವಿಧ ವಿಷಯಗಳ ಆಧಾರದ ಮೇಲೆ ರಾಷ್ಟ್ರೀಯ ಮಟ್ಟದ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ 2026ಕ್ಕೆ ಅಂತಿಮವಾಗಿ 45 ತಂಡಗಳನ್ನು ನಾಮನಿರ್ದೇಶನ ಮಾಡಲಾಯಿತು.

ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ, ನಾವೀನ್ಯತಾ ಕೋಶ ಮತ್ತು ಎಐಸಿಟಿಇ ಬೆಂಬಲದೊಂದಿಗೆ ನಡೆಯುವ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್, ನೈಜ ಜಗತ್ತಿನ ಸವಾಲುಗಳಿಗೆ ನವೀನ ಹಾಗೂ ತಂತ್ರಜ್ಞಾನ ಆಧಾರಿತ ಪರಿಹಾರಗಳನ್ನು ಅಭಿವೃದ್ಧಿಪಡಿಸಲು ವಿದ್ಯಾರ್ಥಿಗಳಿಗೆ ಉತ್ತಮ ವೇದಿಕೆಯನ್ನು ಒದಗಿಸುತ್ತಿದೆ.



ಉದಯವಾಹಿನಿ ಚಿತ್ರ

ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಕುಲಸಚಿವ ಪ್ರೊ. ಆರ್. ಆರ್. ಬಿರಾದಾರ್ ಅವರು, ಕಠಿಣ ಪರಿಶ್ರಮ, ಆತ್ಮವಿಶ್ವಾಸ, ಸಕಾರಾತ್ಮಕ ಚಿಂತನೆ, ಹೋಲಿಕೆಗಳನ್ನು ತಪ್ಪಿಸುವುದು ಮತ್ತು ಸ್ವಯಂಶಿಸ್ತು ಯಶಸ್ಸಿನ ಐದು ಪ್ರಮುಖ ತತ್ವಗಳಾಗಿವೆ. ಯಶಸ್ಸಿಗೆ ಯಾವುದೇ ಶಾರ್ಟ್‌ಕಟ್‌ಗಳಿಲ್ಲ ಎಂದು ಹೇಳಿದ ಅವರು, ವಿಶ್ವವಿದ್ಯಾಲಯದ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು, ವೈಫಲ್ಯಗಳಿಂದ ಕಲಿಯಬೇಕು ಹಾಗೂ ಗುರಿಯತ್ತ ಗಮನಹರಿಸಬೇಕೆಂದು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

### ವರದಾ ನದಿಗೆ ನೀರಿನ ಹರಿವು ಕಡಿಮೆಯಾಗಿದ್ದು, ಕ್ರಸ್ಟ್‌ಗೇಟ್ ಹಾಕುವಂತೆ ಹಾವೇರಿ ಜಿಲ್ಲೆಯ ರೈತರು ಒತ್ತಾಯಿಸಿದ್ದಾರೆ.

# ವರದಾ ನದಿ ಕ್ರಸ್ಟ್‌ಗೇಟ್ ಹಾಕಲು ರೈತರ ಆಗ್ರಹ; ಅಧಿಕಾರಿಗಳು ಹೇಳುವುದೇನು?

• **ಉದಯವಾಹಿನಿ ಹಾವೇರಿ:**


ಜಿಲ್ಲೆಯಲ್ಲಿ ವರದಾ, ತುಂಗಭದ್ರಾ, ಕುಮದ್ವತಿ ಮತ್ತು ಧರ್ಮಾ ನದಿಗಳು ಹರಿಯುತ್ತವೆ. ವರದಾ ಮತ್ತು ತುಂಗಭದ್ರಾ ನದಿಗಳು ನೀರಾವರಿ ಸೇರಿದಂತೆ ಜನ ಜಾನುವಾರುಗಳ ದಾಹ ತೀರಿಸುತ್ತವೆ.

**1 : ತುಂಗಭದ್ರಾ ನದಿಗಳ ಜಲಾನಯನ**
**2 : ಜಾನುವಾರುಗಳ ದಾಹ ತೀರಿಸುತ್ತವೆ**
**3 : 14 ಕ್ರಸ್ಟ್‌ಗೇಟ್ ಕಂ ಬ್ಯಾರೇಜ್‌ಗಳಿವೆ**

ಅದರಲ್ಲೂ ವರದಾ ನದಿಯನ್ನು ಅವಲಂಬಿಸಿ ಹಲವು ಏತ ನೀರಾವರಿ ಯೋಜನೆಗಳನ್ನು ರೂಪಿಸಲಾಗಿದೆ. ಅಲ್ಲದೆ, ಮಳೆಗಾಲ ಮುಗಿಯುತ್ತಿದ್ದಂತೆ ನದಿಗಳಲ್ಲಿ ನೀರು ನಿಲ್ಲಿಸಲು ಹಾವೇರಿ ಜಿಲ್ಲೆಯ 14 ಕಡೆ ಕ್ರಸ್ಟ್‌ಗೇಟ್ ಅಳವಡಿಸಲಾಗಿದೆ.

ಈ ವರ್ಷ ಜಿಲ್ಲೆಯಲ್ಲಿ ವಾಡಿಕೆಗಿಂತ ಕಡಿಮೆ ಪ್ರಮಾಣದ ಮಳೆಯಾಗಿದೆ. ವರದಾ ತುಂಗಭದ್ರಾ ನದಿಗಳ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಾಗಿರುವ ಕಾರಣ ಮೈದುಂಬಿ ಹರಿದಿದ್ದವು. ಆದರೆ ಈಗ ಜಲಾನಯನ ಪ್ರದೇಶದಲ್ಲಿ ಮಳೆಯಿಲ್ಲದ ಕಾರಣ ಈ ನದಿಗಳ ಹರಿವು ಇಳಿಕೆಯಾಗಿದೆ.

ಹಿಂಗಾರು ಮಳೆಯೂ ಸಹ ಕೈಕೊಟ್ಟಿದೆ. ಸದ್ಯ ವರದಾ ನದಿಯಲ್ಲಿ ಅಲ್ಪಸ್ವಲ್ಪ ನೀರು ಹರಿದು ಮುಂದೆ ತುಂಗಭದ್ರಾ ನದಿಗೆ ಸೇರುತ್ತಿದೆ. **ಕ್ರಸ್ಟ್‌ಗೇಟ್ ಹಾಕುವಂತೆ ರೈತರ ಮನವಿ:** ಮಲೆನಾಡಿನಿಂದ ಹಾವೇರಿ ಪ್ರವೇಶಿಸಿ ತುಂಗಭದ್ರಾ ನದಿಗೆ ಸೇರುವ ವರದಾ ನದಿಗೆ ಹಾವೇರಿ


ಉದಯವಾಹಿನಿ ಚಿತ್ರ

> ಆದರೆ ನೀರಿನ ರಭಸ ಅಧಿಕವಿರುವ ಕಾರಣ ಮೇಲಿನ ಗೇಟ್ ಹಾಕಲಾಗುತ್ತಿಲ್ಲ. ಮಧ್ಯದಲ್ಲಿ ಸ್ವಲ್ಪ ಮಳೆ ಬಂದ ಕಾರಣ ಗೇಟ್ ಹಾಕುವುದು ವಿಳಂಬವಾಗಿದೆ. ಆದಷ್ಟು ಬೇಗ ಎಲ್ಲ ಗೇಟ್ ಹಾಕುತ್ತೇವೆ'' ಎಂದು ಹೇಳಿದರು.
> -ಎಇ ರೇವಣೆಪ್ಪ

ಜಿಲ್ಲೆ ಹಾನಗಲ್ ಮತ್ತು ಹಾವೇರಿ ತಾಲ್ಲೂಕುಗಳಲ್ಲಿ ಸುಮಾರು 14 ಕ್ರಸ್ಟ್ ಗೇಟ್ ಕಂ ಬ್ಯಾರೇಜ್‌ಗಳಿವೆ. ಈ ಕ್ರಸ್ಟ್ ಗೇಟ್‌ಗಳನ್ನು ಬಂದ್ ಮಾಡಿದರೆ ನೀರು ನಿಲ್ಲುತ್ತದೆ. ಅಲ್ಲದೆ, ಏತ ನೀರಾವರಿ ಯೋಜನೆಗಳಿಗೆ ನೀರು ಹರಿಸಬಹುದು.

ಪ್ರತಿವರ್ಷ ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಗೇಟ್ ಹಾಕಲಾಗುತ್ತದೆ. ಆದರೆ ಈ ವರ್ಷ ಸೆಪ್ಟಂಬರ್ ಆರಂಭದಲ್ಲೇ ನೀರಿನ ಹರಿವು ಕಡಿಮೆಯಾಗಿದ್ದು, ಕ್ರಸ್ಟ್‌ಗೇಟ್ ಹಾಕುವಂತೆ ರೈತರು

> ಅಧಿಕಾರಿಗಳನ್ನು ಕೇಳಿದರೆ ಜನವರಿಯಲ್ಲಿ ಹಾಕುತ್ತೇವೆ ಎನ್ನುತ್ತಿದ್ದಾರೆ. ಅಧಿಕಾರಿಗಳು ಗೇಟ್ ಹಾಕುವಷ್ಟರಲ್ಲಿ ನದಿಯಲ್ಲಿನ ನೀರು ಖಾಲಿಯಾಗುತ್ತದೆ. ಆದಷ್ಟು ಬೇಗ ಕ್ರಸ್ಟ್‌ಗೇಟ್ ಹಾಕಬೇಕು'' ಎಂದು ಒತ್ತಾಯಿಸಿದ್ದಾರೆ.
> -ರೈತ ಅಬ್ದುಲ್ ಖಾದರ್

ಒತ್ತಾಯಿಸಿದ್ದಾರೆ. ವರದಾ ನದಿಯಲ್ಲಿ ಸ್ವಲ್ಪ ಪ್ರಮಾಣದ ನೀರು ಹರಿಯುತ್ತಿದೆ. ಹೀಗೆ ಬಿಟ್ಟರೆ ಬೇಸಿಗೆಯಲ್ಲಿ ಜನ ಜಾನುವಾರುಗಳಿಗೆ ನೀರಿನ ಕೊರತೆ ಎದುರಾಗಲಿದೆ. ಈಗ ಇರುವ ನೀರನ್ನೇ ಕ್ರಸ್ಟ್‌ಗೇಟ್ ಹಾಕಿದರೆ ರೈತರಿಗೆ, ಜನ ಜಾನುವಾರುಗಳಿಗೆ ನೀರು ಸಿಗಲಿದೆ. ಅಲ್ಲದೆ ಅಂತರ್ಜಲ ಮಟ್ಟ ಸಹ ಸುಧಾರಣೆಯಾಗಲಿದೆ. ಪ್ರತಿ ವರ್ಷದಂತೆ ಅಕ್ಟೋಬರ್ ಗೇಟ್ ಹಾಕುತ್ತೇವೆ ಎಂದರೆ ನಮಗೆ ನೀರಿನ ಸಮಸ್ಯೆ ಯಾಗುವುದು ಗ್ಯಾರಂಟಿ ಎನ್ನುತ್ತಿದ್ದಾರೆ ರೈತರು.

> 'ನಮ್ಮಲ್ಲಿ 7 ಕ್ರಸ್ಟ್‌ಗೇಟ್ ಕಂ ಬ್ಯಾರೇಜ್‌ಗಳಿವೆ. ಗೇಟ್ ಹಾಕಲು ಸಕಲ ಸಿದ್ಧತೆ ಮಾಡಿಕೊಂಡಿದ್ದೇವೆ. ರಿಪೇರಿ ಇರುವ ಗೇಟ್ ಸರಿ ಮಾಡಲಾಗಿದೆ. ಅವುಗಳಿಗೆ ಬೇಕಾಗುವ ರಬ್ಬರ್ ಸೇರಿದಂತೆ ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದೇವೆ. ಈಗಾಗಲೇ ಮರಳಿಹಳ್ಳಿ ಮತ್ತು ಕರ್ಜಗಿಯಲ್ಲಿ ಎರಡು ಹಂತದಲ್ಲಿ ಗೇಟ್ ಹಾಕಿದ್ದೇವೆ.

ರೈತ ರಾಜು ತರ್ಲಗಟ್ಟ ಮಾತನಾಡಿ, ''ರೈತರ ಪ್ರಮುಖ ಬೇಡಿಕೆಯೆಂದರೆ ವರದಾ ನದಿಗೆ ಕ್ರಸ್ಟ್‌ಗೇಟ್ ಹಾಕುವುದು. ಇನ್ನೂ ಕೆಲವು ತಿಂಗಳು ಕಳೆದರೆ ಸಂಕ್ರಾಂತಿ ಹಬ್ಬ ಬರುತ್ತದೆ. ಆದರೆ ಈ ಹಬ್ಬದಲ್ಲಿ ಗುಬ್ಬಿಗಳು ಸಹ ಮೈ ತೊಳೆದುಕೊಳಲಾರದಷ್ಟು ಸಮಸ್ಯೆ ಕಾಡುವ ಆತಂಕವಾಗುತ್ತಿದೆ. ಈ ರೀತಿಯಾದರೆ ರೈತರು ವರದಾ ನದಿಗೆ ಬಂದು ಸಂಕ್ರಾಂತಿ ಆಚರಿಸದೇ ಬರಿಗೈಯಲ್ಲಿ ವಾಪಸ್ ಹೋಗುವ ಪರಿಸ್ಥಿತಿ ಬರಬಹುದು. ಈ ಕ್ರಸ್ಟ್‌ಗೇಟ್‌ಗಳನ್ನು ಯಾವಾಗ ಅಳವಡಿಸುತ್ತಾರೆ. ಗೇಟ್ ಅಳವಡಿಸಿದರೂ ಸಾಕಷ್ಟು ಸೋರಿಕೆ ಇದೆ. ಈ ಕುರಿತಂತೆ ಕೆಳಮಟ್ಟದ ಅಧಿಕಾರಿಗಳಿಂದ ಹಿಡಿದು ಜಿಲ್ಲಾಧಿಕಾರಿ ಜೊತೆ ಮಾತನಾಡಿದರೆ ನಮಗೆ ಆಶ್ವಾಸನೆ ನೀಡುತ್ತಾರೆಯೇ ವಿನಃ ಅನುಷ್ಠಾನವಾಗುತ್ತಿಲ್ಲ'' ಎಂದರು.

ಇದೇ ವೇಳೆ ಮಾತನಾಡಿದ ರೈತ ಅಬ್ದುಲ್ ಖಾದರ್, ''ಕೆರೆಕಟ್ಟೆಗಳು ತುಂಬಿಲ್ಲ, ಜನ ಜಾನುವಾರುಗಳಿಗೆ ಕುಡಿಯಲು ನೀರಿಲ್ಲ. ಸವಣೂರು ತಾಲ್ಲೂಕಿನ ಶಿರಬಡಗಿ ಗ್ರಾಮ ಸೇರಿದಂತೆ ವಿವಿಧ ಗ್ರಾಮಗಳ ಕೆರೆಗಳಲ್ಲಿ ನೀರಿನ ಕೊರತೆಯಾಗಿದೆ. ವರದಾ ನದಿ ನೀರನ್ನು ಹಿಡಿದಿಡುವ ಪ್ರಯತ್ನ ಮಾಡಬೇಕು. ಆದರೆ ಇಲ್ಲಿಯವರೆಗೆ ಗೇಟ್ ಹಾಕಿಲ್ಲ.

## ಮಿನಿ ನ್ಯೂಸ್

# ರಕ್ತ ಹೀನತೆಯಿಂದ ಮುಕ್ತಿ ಮಾಡುವುದೇ ಪೋಷಣ್ ಮಾಸಾಚಾರಣೆ ಉದ್ದೇಶ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಯಲಬುರ್ಗಾ:**

ದೇಶದಲ್ಲಿ ಪ್ರತಿ 44 ಸೆಕೆಂಡುಗಳಿಗೆ ಒಂದು ಶಿಶು ಮೃತಪಡುತ್ತಿದೆ. ಗರ್ಭಿಣಿಯರು, ಬಾಣಂತಿಯರು, ಮಕ್ಕಳು ಆದಷ್ಟು ಪೌಷ್ಟಿಕಾಂಶದ ಆಹಾರ ಸೇವಿಸಬೇಕು ಎಂದು ಹಿರಿಯ ಅಂಗನವಾಡಿ ಕಾರ್ಯಕರ್ತೆ ಬಸಮ್ಮ ಉಣಚಗೇರಿ ಅವರು ತಿಳಿಸಿದರು.

ತಾಲ್ಲೂಕಿನ ಮುಧೋಳ ಗ್ರಾಮದ 6 ನೇ ಅಂಗನವಾಡಿ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ 9ನೇ ಪೋಷಣ್ ಮಾಸಚಾರಣೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ರಕ್ತ ಹೀನತೆ ಮುಕ್ತ ಭಾರತ ನಿರ್ಮಾಣ ಮಾಡವುದು ಪೋಷಣ್ ಅಭಿಯಾನದ ಗುರಿ. ಈ ಅಭಿಯಾನದಲ್ಲಿ ರಕ್ತಹೀನತೆಯಿಂದ ಬಳಲುತ್ತಿರುವವರನ್ನು ಗುರುತಿಸಿ ಚಿಕಿತ್ಸೆ ನೀಡಲಾಗುತ್ತದೆ. ಬೆಳೆಯುವ ಮಗುವಿನಿಂದ ಹಿಡಿದು 19 ವರ್ಷದವರೆಗಿನವರೆಗೂ ಆರೋಗ್ಯ ತಪಾಸಣಾ ಮಾಡುತ್ತಿದ್ದೇವೆ ಮತ್ತು ಇದರ ಬಗ್ಗೆ ಸಾರ್ವಜನಿಕರಿಗೂ ತಿಳಿ ಹೇಳುವ ಕೆಲಸವಾದರೆ ಮಾತ್ರ ರೋಗ ತಡೆಗಟ್ಟಲು ಸಾಧ್ಯ ಎಂದು ತಿಳಿಸಿದರು.

ಇನ್ನೊರ್ವ ಅಂಗನವಾಡಿ ಕಾರ್ಯಕರ್ತೆ ಅಯ್ಯಮ್ಮ ಬಳಿಗಾರ್ ಮಾತನಾಡಿ, ಮಗುವಿಗೆ ಪೌಷ್ಟಿಕಾಂಶ ಆಹಾರ ನೀಡಿದರೆ ಅದು ಚೆನ್ನಾಗಿ ಬೆಳೆಯುತ್ತದೆ. ಆಹಾರದ ಸಾತ್ವಿಕತೆ ಗೊತ್ತಿದ್ದರೆ ಏನು ಬೇಕಾದರೂ ಮಾಡಬಹುದು. ಯಾವ ಆಹಾರ ತೆಗೆದುಕೊಳ್ಳುತ್ತೇವೆಯೋ ಅದನ್ನು ಸರಿಯಾದ ಕ್ರಮದಲ್ಲಿ ತೆಗೆದುಕೊಳ್ಳಬೇಕು. ಅಂಗನವಾಡಿ ಕೇಂದ್ರದಲ್ಲಿ ದೊರಕುವ ಆಹಾರ ಸೇವನೆ ಮಾಡಬೇಕು ಮತ್ತು ಬೇಕರಿ ಪಿಜ್ಜಾ ಪಾನಿಪುರಿಯಂತಹ ತಿಂಡಿ ತಿನುಸುಗಳ ಸೇವನೆ ಕಡಿಮೆ ಮಾಡಬೇಕು ಎಂದರು.

ಅಂಗನವಾಡಿ ಕಾರ್ಯಕರ್ತೆಯಾದ ರತ್ನಾ ದೇವಕ್ಕಿ. ಪೋಷಣ ಮಾಸಾಚಾರಣೆ ಕಾರ್ಯಕ್ರಮಕ್ಕೆ ಆಗಮಿಸಿದ ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು ನೀಲಮ್ಮ ಕಂಡೋಜಿ. ಆಶಾ ಕಾರ್ಯ ಕರ್ತೆಯರಾದ ಶೋಭಾ ಹೂಗಾರ್. ಶಕುಂತಲಾ ಮಂಡಲಗೇರಿ. ಗರ್ಭಿಣಿ ಸ್ತ್ರೀಯರು, ಮತ್ತು ಅಂಗನವಾಡಿ ಸಹಾಯಕಿ ಕಸ್ತೂರಿ. ಮಕ್ಕಳ ತಾಯಂದಿರ. ಗರ್ಭಿಣಿಯರು. ಮುದ್ದು ಮಕ್ಕಳು ಪಾಲ್ಗೊಂಡಿದ್ದರು.

# ವಾರದೊಳಗೆ ಔರಾದ, ಕಮಲನಗರ ಬರಪೀಡಿತವೆಂದು ಘೋಷಿಸಿ

• **ಉದಯವಾಹಿನಿ, ಔರಾದ್ :**


ಉದಯವಾಹಿನಿ ಚಿತ್ರ

ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಬರಪೀಡಿತ ತಾಲ್ಲೂಕುಗಳ ಪಟ್ಟಿಯಲ್ಲಿ ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕುಗಳನ್ನು ಸೇರಿಸದೆ ಕಡೆಗಣಿಸಿರುವುದಕ್ಕೆ ಶಾಸಕ ಪ್ರಭು ಬಿ.ಚವ್ಹಾಣ ಅವರು ತೀವ್ರ ಆಕ್ರೋಶ ಹೊರ ಹಾಕಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಔರಾದ(ಬಿ) ಹಾಗೂ ಕಮಲನಗರ ತಾಲ್ಲೂಕುಗಳಲ್ಲಿ ಬಹುತೇಕ ರೈತರು ಮಳೆಯಾಧಾರಿತ ಕೃಷಿಯನ್ನೇ ಅವಲಂಬಿಸಿದ್ದಾರೆ. ಪ್ರಸಕ್ತ ಹಂಗಾಮಿನಲ್ಲಿ ಮಳೆ ಕೊರತೆಯಿಂದ ಬಿತ್ತನೆಯಾದ ಬೆಳೆಗಳು ಸಂಪೂರ್ಣವಾಗಿ ಒಣಗಿ ನಿಂತಿವೆ. ಆರಂಭದಲ್ಲೇ ಮಳೆ ವಿಳಂಬವಾಗಿದ್ದರಿಂದ ಬಿತ್ತನೆ ತಡವಾಯಿತು.

ನಂತರವೂ ಸಮರ್ಪಕ ಮಳೆಯಾಗದೆ ರೈತರು ಒಂದೇ ಬೆಳೆಗೆ ಎರಡು-ಮೂರು ಬಾರಿ ಬಿತ್ತನೆ ಮಾಡಿ ಬೀಜ, ಗೊಬ್ಬರ, ಕೂಲಿ ಸೇರಿದಂತೆ ಸಾವಿರಾರು ರೂಪಾಯಿ ಹಣವನ್ನು ಮಣ್ಣಿನಲ್ಲಿ ಸುರಿದಿದ್ದಾರೆ. ಇದೀಗ ಬೆಳೆ ಕೈಕೊಟ್ಟಿರುವುದರಿಂದ ರೈತರು ಸಾಲದ ಸುಳಿಗೆ ಸಿಲುಕಿ ಕಂಗಾಲಾಗಿದ್ದಾರೆ. ಈ ವಾಸ್ತವ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತರಲು ಪದೇ ಪದೇ ಪತ್ರಗಳನ್ನು ಬರೆದು ಮನವಿ ಮಾಡಿದ್ದೇನೆ. ಅಧಿಕಾರಿಗಳ ಗಮನಕ್ಕೂ ತಂದಿದ್ದೇನೆ. ಆದರೂ ರೈತರ ನೋವಿಗೆ ಸ್ಪಂದಿಸದೆ ಸರ್ಕಾರ ಕಣ್ಣು, ಕಿವಿ ಮುಚ್ಚಿಕೊಂಡು ಕುಳಿತಿರುವುದು ಅತ್ಯಂತ ಖಂಡನೀಯ.

ಇಲ್ಲದಿದ್ದರೆ ಬಿಜೆಪಿ ರೈತರೊಂದಿಗೆ ಬೀದಿಗಿಳಿಯಲಿದೆ. ಸರ್ಕಾರಿ ಕಚೇರಿಗಳಿಗೆ ಮುತ್ತಿಗೆ ಮತ್ತು ಬೀದರ- ಔರಾದ ಹಾಗೂ ಬೀದರ-ಕಮಲನಗರ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಬೃಹತ್ ಪ್ರತಿಭಟನೆ ನಡೆಸಲಾಗುವುದು. **ಇದು ಕೇವಲ ಎಚ್ಚರಿಕೆ ಅಲ್ಲ;** ರೈತರ ಹಕ್ಕಿಗಾಗಿ ಕೈಗೊಳ್ಳಲಿರುವ ಹೋರಾಟದ ಘೋಷಣೆ. ರೈತರ ತಾಳ್ಮೆಯನ್ನು ಸರ್ಕಾರ ದೌರ್ಬಲ್ಯವೆಂದು ಭಾವಿಸಬಾರದು. ಔರಾದ ಹಾಗೂ ಕಮಲನಗರ ರೈತರಿಗೆ ನ್ಯಾಯ ಸಿಗುವವರೆಗೆ ಹೋರಾಟ ನಿಲ್ಲುವುದಿಲ್ಲ ಎಂದು ಶಾಸಕರು ರಾಜ್ಯ ಸರ್ಕಾರಕ್ಕೆ ಖಡಕ್ ಎಚ್ಚರಿಕೆ ನೀಡಿದ್ದಾರೆ.

# ಬಂಡೆಯ ಮೇಲೆ ಭೋಜನ ಸವಿದ ಭಕ್ತರು

• **ಉದಯವಾಹಿನಿ, ಕಲಬುರಗಿ,:**

ಯಾದಗಿರಿ ಜಿಲ್ಲೆಯ ಗುರಮಠಕಲ್ ತಾಲ್ಲಾಕಿನ ಸುಕ್ಷೇತ್ರ ಬಂಡೆ ರಾಚೋಟೇಶ್ವರ ಭವ್ಯ ರಥೋತ್ಸವ ಸಹಸ್ರಾರು ಭಕ್ತರ ಮಧ್ಯೆ ಅದ್ದೂರಿಯಾಗಿ ನೆರವೇರಿತು. ನಂತರ ಭಕ್ತರು ಅವರವರ ಮನೆಯಿಂದ ತಂದ ಭಕ್ಷ ಭೋಜನಗಳಾದ ಹೋಳಿಗಿ, ಕಡಬು ,ರೊಟ್ಟಿ,ಪುಂಡಿಪಲ್ಯ, ಚಿತ್ರಾನ್ನ , ಅನ್ನ ಸಾರು, ಅವರು ಕುಳಿತ ನಿಂತ ಬಂಡೆ ಜಾಗವನ್ನು ತೊಳೆದು ಬಂಡೆಯ ಮೇಲೆಯೇ ಎಲ್ಲರೂ ಊಟ ಮಾಡಿದರು. ತಾಟು, ಪ್ಲೇಟ್, ಬಾಳೆಎಲೆ ,ಪತ್ರೋಳಿ, ಚಮಚ ಯಾವದೂ ಇಲ್ಲ. ಇದೊಂದು ವಿಶಿಷ್ಟ ವಿಶೇಷವಾದ ಜಾತ್ರೆ. ಮನೆಯಿಂದ ಬರುವಾಗಲೇ ಎಲ್ಲರ ತಲೆ ಮೇಲೆ ಬುತ್ತಿಯ ಗಂಟು ಕೈಯಲ್ಲಿ ಪ್ಲಾಸ್ಟಿಕ ಕೊಡದೊಂದಿಗೆ ಬರುವರು. ರಥೋತ್ಸವ ಮುಗಿದ ನಂತರ ಬಂಡೆಮೇಲೆ ಊಟ ಪ್ರಾರಂಭ. ಸುಮಾರು ಒಂದು ತಿಂಗಳುಗಳ ಕಾಲ ಈ ಊರಿನ ಹಾಗೂ ಸುತ್ತಮುತ್ತಲಿನ ಗ್ರಾಮದ ಜನರು ಪುಂಡಿಪಲ್ಯ ಊಟ ಮಾಡಿರುವುದಿಲ್ಲ. ಇಂದೇ ತಿಂಗಳ ನಂತರ ಮತ್ತೆ ವಿಶೇಷ ಪುಂಡಿ ಪಲ್ಯ ರೊಟ್ಟಿ ಊಟ ದೇವರ ಸನ್ನಿಧಿಯಲ್ಲಿಯೇ ನೆರವೇರುವದು.ಮನೆಯಿಂದ ಊಟ ತರದವರಿಗಾಗಿ ಸಮಿತಿವತಿಯಿಂದ ಪ್ರಸಾದದ ವ್ಯವಸ್ಥೆ ಮಾಡಿಸಲಾಗಿತ್ತು.

# 6 ಹೆದ್ದಾರಿಗಳಲ್ಲಿ ಎಐ ಆಧಾರಿತ ಕ್ಯಾಮೆರಾ ಅಳವಡಿಕೆ

• **ಉದಯವಾಹಿನಿ, ಕಲಬುರಗಿ,**

ಜಿಲ್ಲೆಯ ಸಾರ್ವಜನಿಕರ ಸುರಕ್ಷತೆ,ರಸ್ತೆಗಳಲ್ಲಿ ಸುಗಮ,ಶಿಸ್ತು ಬದ್ಧ ಸಂಚಾರವನ್ನು ಖಾತರಿಪಡಿಸುವ ಉದ್ದೇಶದಿಂದ ಜಿಲ್ಲಾ ಪೊಲೀಸ್ ಇಲಾಖೆಯು ಮಹತ್ವದ ಹೆಜ್ಜೆಯನ್ನಿಟ್ಟಿದೆ. ರಸ್ತೆ ಸುರಕ್ಷತೆ ಎಂಬುದು ಪ್ರತಿಯೊಬ್ಬ ನಾಗರಿಕನ ಜೀವ ಹಾಗೂ ಕುಟುಂಬದ ಹಿತದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದ್ದು, ಸಂಚಾರ ನಿಯಮಗಳನ್ನು ಪಾಲಿಸುವ ಮೂಲಕ ಪ್ರತಿಯೊಬ್ಬರೂ ತಮ್ಮ ಕೊಡುಗೆ ನೀಡಬಹುದಾಗಿದೆ. ಸಾರ್ವಜನಿಕರಿಗೆ ಇನ್ನಷ್ಟು ಸುರಕ್ಷಿತ ವ್ಯವಸ್ಥಿತ ಸಂಚಾರ ವಾತಾವರಣವನ್ನು ಒದಗಿಸುವ ಸಲುವಾಗಿ ಅತ್ಯಾಧುನಿಕ ಎಐ ಆಧಾರಿತ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಐಟಿಎಂಎಸ್ ತಂತ್ರಾಂಶದ ಮೂಲಕ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ತಿಳಿಸಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಗ್ಗೆ | 06:00 ರಿಂದ 07:30 |

**ಮೇಷ** ಆರೋಗ್ಯದ ಬಗ್ಗೆ ಸ್ವಲ್ಪ ಕಾಳಜಿ ವಹಿಸಬೇಕು. ಮನೆಯ ಅಗತ್ಯವಾದ ವಸ್ತುಗಳ ಮೇಲೆ ಹಣವನ್ನು ಖರ್ಚು ಮಾಡುವುದು ಖಂಡಿತವಾಗಿಯೂ ನಿಮಗೆ ಆರ್ಥಿಕ ತೊಂದರೆಗಳನ್ನು ನೀಡುತ್ತದೆ ಆದರೆ ಇದರಿಂದ ನೀವು ಭವಿಷ್ಯದ ಅನೇಕ ತೊಂದರೆಗಳಿಂದ ತಪ್ಪಿಸಿಕೊಳ್ಳಬಹುದು.

**ವೃಷಭ** ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕವಾಗಿರುತ್ತವೆ. ನಿಮ್ಮ ಮಗುವಿನಂಥ ಮುಗ್ಧ ವರ್ತನೆ ಕುಟುಂಬದ ಸಮಸ್ಯೆಯನ್ನು ಪರಿಹರಿಸುವಲ್ಲಿ ಒಂದು ಪ್ರಮುಖ ಪಾತ್ರ ವಹಿಸುತ್ತದೆ. ನೀವು ಕುರುಡು ಪ್ರೀತಿಯನ್ನು ಪಡೆಯಲು ಸಾಧ್ಯವಾಗುತ್ತದೆ.

**ಮಿಥುನ** ನಿಮ್ಮನ್ನು ನೀವೇ ಅನಗತ್ಯವಾಗಿ ದೂಷಿಸುವುದು ನಿಮ್ಮ ಚೈತನ್ಯವನ್ನು ಕುಗ್ಗಿಸಬಹುದು. ಹಣದ ಪ್ರಯೋಜನವನ್ನು ಪಡೆಯುವ ಸಾಧ್ಯತೆ ಇದೆ ನಿಮ್ಮ ಕೋಪದ ಸ್ವಭಾವದಿಂದ ಹಣವನ್ನು ಗಳಿಸುವಲ್ಲಿ ಸಾಧ್ಯವಾಗದಿರಬಹುದು. ನಿಮ್ಮಲ್ಲಿ ಕೆಲವು ಆಭರಣ ಗೃಹಬಳಕೆಯ ಸಾಧನ ಖರೀದಿಸುವ ಸಾಧ್ಯತೆಗಳಿವೆ.

**ಕರ್ಕಾಟಕ** ನಿಮ್ಮ ಒರಟು ವರ್ತನೆ ನಿಮ್ಮ ಸ್ನೇಹಿತರಿಗೆ ಸ್ವಲ್ಪ ಸಮಸ್ಯೆ ಉಂಟುಮಾಡಬಹುದು. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ. ನಿಮ್ಮ ಆಕರ್ಷಣೆ ಹಾಗೂ ವ್ಯಕ್ತಿತ್ವ ನೀವು ಹೊಸ ಸ್ನೇಹಿತರನ್ನು ಗಳಿಸಲು ಸಹಾಯ ಮಾಡುತ್ತದೆ.

**ಸಿಂಹ** ನೀವು ಇತರರೊಡನೆ ನಿಮ್ಮ ಖುಷಿಯ ಕ್ಷಣಗಳನ್ನು ಹಂಚಿಕೊಳ್ಳುತ್ತಿದ್ದಂತೆ ನಿಮ್ಮ ಆರೋಗ್ಯ ಅರಳುತ್ತದೆ. ಆದರೆ ಇದನ್ನು ನಿರ್ಲಕ್ಷಿಸುವುದು ನಿಮಗೆ ತೊಂದರೆ ತರುತ್ತದೆ. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ ಮತ್ತು ವೆಚ್ಚಗಳು ನಿಮ್ಮ ಮನಸ್ಸನ್ನು ಆವರಿಸಿಕೊಳ್ಳುತ್ತವೆ.

**ಕನ್ಯಾ** ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ಇಂದು ಹಣ ನಿಮ್ಮ ಕೈಯಲ್ಲಿ ಉಳಿಯುದಿಲ್ಲ, ಇಂದು ನೀವು ಹಣವನ್ನು ಉಳಿಸುವಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

**ತುಲಾ** ಹೆದರಿಕೆ ನಿಮ್ಮ ಸಂತೋಷವನ್ನು ಹಾಳುಗೆಡವಬಹುದು. ನೀವು ಇದು ನಮ್ಮ ಆಲೋಚನೆಗಳು ಮತ್ತು ಕಲ್ಪನೆಯ ಪ್ರಭಾವವೆಂದು ಅರ್ಥಮಾಡಿಕೊಳ್ಳಬೇಕು. ಇದು ಸ್ವಾಭಾವಿಕತೆಯನ್ನು ಕೊಲ್ಲುತ್ತದೆ–ಜೀವನದ ಆನಂದವನ್ನು ಹೀರಿ ಕೊಳ್ಳುತ್ತದೆ ಹಾಗೂ ನಮ್ಮ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ.

**ವೃಶ್ಚಿಕ** ಡೈರಿ ಉದ್ಯಮಕ್ಕೆ ಸೇರಿರುವವರು ಇಂದು ಆರ್ಥಿಕ ಲಾಭವನ್ನು ಪಡೆಯುವ ಪ್ರಬಲ ಸಾಧ್ಯತೆ ಇದೆ. ವೈಯಕ್ತಿಕ ವಿಷಯಗಳನ್ನು ಬಗೆಹರಿಸುವಲ್ಲಿ ಉದಾರತೆ ತೋರಿ, ಆದರೆ ನಿಮ್ಮನ್ನು ಪ್ರೀತಿಸುವ ಮತ್ತು ಕಾಳಜಿ ತೋರುವವರನ್ನು ನೋಯಿಸದಿರಲು ನಿಮ್ಮ ಭಾಷೆಯ ಬಗ್ಗೆ ಎಚ್ಚರ ವಹಿಸಿ.

**ಧನಸ್ಸು** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯ ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದ್ದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ. ಇದು ಜೀವನದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯ ಮಾಡುತ್ತದೆ.

**ಮಕರ** ಅಭದ್ರತೆ / ದಿಗ್ಭ್ರಮೆಯ ಭಾವನೆ ತಲೆತಿರುಗುವಿಕೆಯನ್ನು ಉಂಟುಮಾಡಬಹುದು. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ಆದ್ದರಿಂದ ಇಂದು ನಿಮ್ಮ ಮೂಲಕ ಉಳಿಸಲಾಗಿರುವ ಹಣ ನಿಮ್ಮ ತುಂಬಾ ಕೆಲಸಕ್ಕೆ ಬರಬಹುದು ಮತ್ತು ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು.

**ಕುಂಭ** ನಿಮ್ಮಲ್ಲಿ ಚುರುಕುತನವನ್ನು ನೋಡಬಹುದು. ಆರೋಗ್ಯವು ನಿಮ್ಮನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಕೆಲವರಿಗೆ ಕುಟುಂಬದಲ್ಲಿ ಒಂದು ಹೊಸ ಆಗಮನ ಸಂಭ್ರಮಾಚರಣೆ ಆನಂದದ ಕ್ಷಣಗಳನ್ನು ತೆರೆದಿಡುತ್ತದೆ.


**ಮೀನ** ಕೆಲಸದಲ್ಲಿ ಹಿರಿಯರಿಂದ ಒತ್ತಡ ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ಹಣಕಾಸು ಸ್ಥಿತಿ ಊಹಾಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ. ಮನೆಯ ವಿಷಯಗಳು ಮತ್ತು ಬಾಕಿಯಿರುವ ಗೃಹಕೃತ್ಯಗಳನ್ನು ಪೂರೈಸಲು ಒಂದು ಅನುಕೂಲಕರ ದಿನ.

# ಸಚಿವ ಸತೀಶ್ ಜಾರಕಿಹೊಳಿ ನಿವಾಸ ಮೇಲೆ ದಾಳಿ ಏಕೆ; ED ಹೇಳಿದೇನು?

• **ಉದಯವಾಹಿನಿ ಬೆಳಗಾವಿ:**

ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರ ಬಾಮೈದ, ಅಬಕಾರಿ ಇಲಾಖೆಯ ಜಂಟಿ ಆಯುಕ್ತ ವೈ. ಮಂಜುನಾಥ್ ಅವರ ಆಸ್ತಿಗಳ ಮೇಲೆ ಜಾರಿ ನಿರ್ದೇಶನಾಲಯ ಹಲವು ಕಡೆ ದಾಳಿ ನಡೆಸಿದ ಕೆಲವೇ ವಾರಗಳ ಬಳಿಕ, ಇದೀಗ ಸ್ವತಃ ಸತೀಶ್ ಜಾರಕಿಹೊಳಿಗೆ ಸಂಬಂಧಿಸಿದ ಸುಮಾರು 18 ಸ್ಥಳಗಳ ಮೇಲೆ ಇಡಿ ಅಧಿಕಾರಿಗಳು ಬುಧವಾರ ಬೆಳಗ್ಗೆ ಶೋಧ ನಡೆಸಿದ್ದಾರೆ.

ಬೆಂಗಳೂರಿನ ಡಾಲರ್ಸ್ ಕಾಲನಿಯಲ್ಲಿರುವ ಸಚಿವರ ನಿವಾಸ, ಸರ್ಕಾರಿ ವಸತಿ ಗೃಹಗಳು ಹಾಗೂ ಬೆಳಗಾವಿ ಮತ್ತು ಗೋಕಾಕ್‌ನಲ್ಲಿರುವ ಆಸ್ತಿಗಳ ಮೇಲೂ ಶೋಧ ನಡೆಸಲಾಗಿದೆ. ಬಾರ್ ಲೈಸೆನ್ಸ್‌ಗಳ ವಿತರಣೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳು ಸೇರಿದಂತೆ ವಿವಿಧ


ಉದಯವಾಹಿನಿ ಚಿತ್ರ

ವಿಚಾರಗಳ ಕುರಿತು ನಡೆಯುತ್ತಿರುವ ತನಿಖೆಯ ಭಾಗವಾಗಿ ಈ ದಾಳಿ ನಡೆದಿದೆ ಎನ್ನಲಾಗಿದೆ.

ಇಂದು ಮುಂಜಾನೆಯಿಂದ ಆರಂಭವಾದ ಶೋಧ ಕಾರ್ಯಾಚರಣೆಯನ್ನು ಸಚಿವರ ಪುತ್ರಿ, ಹಾಗೂ ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರಿಗೆ ಸಂಬಂಧಿಸಿದ ಸ್ಥಳಗಳು ಮತ್ತು ಕುಟುಂಬಕ್ಕೆ ಸಂಬಂಧಿಸಿದ ಇತರ ಸ್ಥಳಗಳಲ್ಲೂ ನಡೆಸಲಾಗಿದೆ.

ಜಾರಕಿಹೊಳಿ ಅವರ ಆಪ್ತ ಮೂಲಗಳ ಪ್ರಕಾರ, ಮಹಾರಾಷ್ಟ್ರದಲ್ಲಿರುವ ಕೆಲವು ಸ್ಥಳಗಳಲ್ಲೂ ಶೋಧ ಕಾರ್ಯಾಚರಣೆ ನಡೆಸಲಾಗಿದೆ.

ಅಬಕಾರಿ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ EDನಡೆಸುತ್ತಿರುವ ತನಿಖೆಯ ಮುಂದುವರಿದ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದೆ. 18 ಬಾರ್ ಲೈಸೆನ್ಸ್‌ಗಳ ವಿತರಣೆಯಲ್ಲಿ ನಡೆದಿರುವ ಎನ್ನಲಾದ ಅಕ್ರಮಗಳು ಮತ್ತು ಅಕ್ರಮ ಹಣದ ವಹಿವಾಟಿನ ಬಗ್ಗೆಯೂ ತನಿಖೆ ನಡೆಯುತ್ತಿದೆ.

# ಗಣೇಶೋತ್ಸವ ಆಚರಣೆಗೆ ನಿರಂತರ ವಿದ್ಯುತ್ ಪೂರೈಕೆ :ಜೆಸ್ಕಾಂ ಅಧ್ಯಕ್ಷರ ಭರವಸೆ

### ಗಣೇಶ ಉತ್ಸವದಲ್ಲಿ ಸಾರ್ವಜನಿಕರೊಂದಿಗೆ ನಾನು ಮತ್ತು ಜೆಸ್ಕಾಂ ಇಡೀ ತಂಡ ಎಲ್ಲಾ ಸಮಯದಲ್ಲೂ ಲಭ್ಯವಿರುತ್ತೇವೆ

• **ಉದಯವಾಹಿನಿ ಕಲಬುರಗಿ,:**

ಗಣೇಶ ಚತುರ್ಥಿ ಹಬ್ಬದ ಹಿನ್ನೆಲೆಯಲ್ಲಿ, ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಸುರಕ್ಷಿತ, ಸುಗಮ ಹಾಗೂ ನಿರಂತರ ವಿದ್ಯುತ್ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ) ವತಿಯಿಂದ ಸಮಗ್ರ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ. ಗಣೇಶ ಉತ್ಸವದಲ್ಲಿ ಸಾರ್ವಜನಿಕರೊಂದಿಗೆ ನಾನು ಮತ್ತು ಜೆಸ್ಕಾಂ ಇಡೀ ತಂಡ ಎಲ್ಲಾ ಸಮಯದಲ್ಲೂ ಲಭ್ಯವಿರುತ್ತೇವೆ. ನಮ್ಮ ಸಂಪೂರ್ಣ ಜೆಸ್ಕಾಂ ತಂಡವು ಸಾರ್ವಜನಿಕರು ಹಾಗೂ ಗಣೇಶೋತ್ಸವ ಆಯೋಜಕರಿಗೆ ಅಗತ್ಯವಿರುವ ಪ್ರತಿಯೊಂದು ಹಂತದಲ್ಲೂ ಸಹಾಯ ಮಾಡಲು ಸ್ಥಳದಲ್ಲೇ ಕಾರ್ಯನಿರ್ವಹಿಸಲಿದೆ. ಹಬ್ಬಕ್ಕೆ ಸಂಬಂಧಿಸಿದ ವಿದ್ಯುತ್ ವ್ಯವಸ್ಥೆಗಳನ್ನು ಜೆಸ್ಕಾಂ ಅಧ್ಯಕ್ಷರ

1 : ವಿದ್ಯುತ್ ಮಂಜೂರು, ತಾಂತ್ರಿಕ ನೆರವು
2 : ಸಂಪೂರ್ಣ ಸುರಕ್ಷಿತವಾಗಿ ಆಚರಿಸುವಂತೆ
3 : ನೇರವಾಗಿ ಮೇಲ್ವಿಚಾರಣೆ ಮಾಡಲಿದ್ದಾರೆ

ಕಚೇರಿ ಹಾಗೂ ಹಿರಿಯ ಅಧಿಕಾರಿಗಳು ನೇರವಾಗಿ ಮೇಲ್ವಿಚಾರಣೆ ಮಾಡಲಿದ್ದಾರೆ. ಸಾರ್ವಜನಿಕರು ಹಾಗೂ ಆಯೋಜಕರ ತುರ್ತು ಅಗತ್ಯಗಳಿಗಾಗಿ 24–7 ತುರ್ತು ಸ್ಪಂದನಾ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

ಉದಯವಾಹಿನಿ ಚಿತ್ರ

ಜಿಲ್ಲಾಡಳಿತ ಹಾಗೂ ಸ್ಥಳೀಯ ನಾಗರಿಕ ಸಂಸ್ಥೆಗಳ ಸಹಯೋಗದಲ್ಲಿ ಸಹಾಯ ಕೇಂದ್ರಗಳನ್ನು ಕಾರ್ಯಗತಗೊಳಿಸಲಾಗುವುದು. ಗಣೇಶೋತ್ಸವ ಮಂಟಪಗಳಿಗೆ ಅಗತ್ಯವಿರುವ ತಾತ್ಕಾಲಿಕ ವಿದ್ಯುತ್ ಸಂಪರ್ಕಗಳನ್ನು ಕೆಇ ಆರ್ ಸಿ ನಿಗದಿಪಡಿಸಿರುವ ದರಗಳ ಅನ್ವಯ ತ್ವರಿತವಾಗಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ವಿದ್ಯುತ್ ಸಂಪರ್ಕ ನೀಡುವ ಮೊದಲು ಜೆಸ್ಕಾಂ ಇಂಜಿನಿಯರ್‌ಗಳು ಗಣೇಶೋತ್ಸವ ಮಂಟಪಗಳ ಸ್ಥಳಗಳನ್ನು ಪರಿಶೀಲಿಸಲಿದ್ದಾರೆ.

ಮೇಲ್ದರ್ಜೆಯ ( ಎಚ್ ಟಿ ) ಮತ್ತು ಕಡಿಮೆ ದರ್ಜೆಯ ವಿದ್ಯುತ್ ಮಾರ್ಗಗಳಿಂದ ಅಗತ್ಯ ಸುರಕ್ಷತಾ ಅಂತರ ಸೇರಿದಂತೆ ಇತರ ಎಲ್ಲಾ ಸುರಕ್ಷತಾ ಮಾನದಂಡಗಳನ್ನು ಪರಿಶೀಲಿಸಿದ ನಂತರವೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.



ವಿದ್ಯುತ್ ಮಂಜೂರು, ತಾಂತ್ರಿಕ ನೆರವು ಅಥವಾ ಸುರಕ್ಷತಾ ಪರಿಶೀಲನೆಗಾಗಿ ಆಯೋಜಕರು ಯಾವುದೇ ಹಿಂಜರಿಕೆಯಿಲ್ಲದೆ ನಮ್ಮನ್ನು ಸಂಪರ್ಕಿಸಬಹುದು. ಹಬ್ಬವನ್ನು ಬೆಳಕಿನಿಂದ, ಸುಗಮವಾಗಿ ಹಾಗೂ ಸಂಪೂರ್ಣ ಸುರಕ್ಷಿತವಾಗಿ ಆಚರಿಸುವಂತೆ ಮಾಡುವುದು ನಮ್ಮ ಪ್ರಮುಖ ಆದ್ಯತೆಯಾಗಿದೆ ಎಂದು ಹೇಳಿದರು. **–ಜೆಸ್ಕಾಂ ಅಧ್ಯಕ್ಷರ**

ಪ್ರಮುಖ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ಮಾರ್ಗಗಳಲ್ಲಿ ಒ ಅಂಡ್ ಎಂ ಸಿಬ್ಬಂದಿ, ಜೆಸ್ಕಾಂ ವಾಹನಗಳು ಹಾಗೂ ಅಗತ್ಯ ಸುರಕ್ಷತಾ ಉಪಕರಣಗಳನ್ನು ನಿಯೋಜಿಸಲಾಗಿದೆ. ಎತ್ತರದ ಗಣೇಶ ಮೂರ್ತಿಗಳನ್ನು ಸಾಗಿಸುವ ಮೆರವಣಿಗೆಗಳಿಗೆ ವಿಶೇಷ ಗಮನ ನೀಡಲಾಗುತ್ತಿದ್ದು, ಅಗತ್ಯವಿರುವ ಕಡೆಗಳಲ್ಲಿ ಮರದ ಕೊಂಬೆಗಳನ್ನು ತೆರವುಗೊಳಿಸುವುದು ಜೋತುಬಿದ್ದಿರುವ ವಿದ್ಯುತ್ ತಂತಿಗಳನ್ನು ಮೇಲಕ್ಕೆ ಎತ್ತುವ ಕ್ರಮಗಳನ್ನು ಕೈಗೊಳ್ಳಲಾಗುವುದು.ಗಣೇಶೋತ್ಸವದ ಸಂದರ್ಭದಲ್ಲಿ ಯಾವುದೇ ಅಡಚಣೆ ಉಂಟಾಗದಂತೆ, ನಗರ ಹಾಗೂ ಗ್ರಾಮೀಣ ಪ್ರದೇಶಗಳ ಫೀಡರ್‌ಗಳಲ್ಲಿ ಯೋಜಿತ ನಿರ್ವಹಣಾ ಕಾರ್ಯಗಳಿಗಾಗಿ ಕೈಗೊಳ್ಳುವ ವಿದ್ಯುತ್ ವ್ಯತ್ಯಯಗಳನ್ನು ಹಬ್ಬದ ಅವಧಿಯಲ್ಲಿ ಸಾಧ್ಯವಾದಷ್ಟು

ಜೆಸ್ಕಾಂ ಕೇಂದ್ರಿಕೃತ ಟೋಲ್–ಫ್ರೀ ಸಹಾಯವಾಣಿ: 1912ಹಾಗೂ ಅಧಿಕೃತ ಸಾಮಾಜಿಕ ಜಾಲತಾಣಗಳಾದ ವಾಟ್ಸಪ್ ಸೇರಿದಂತೆ ಇತರ ಅಧಿಕೃತ ಮಾಧ್ಯಮಗಳೂ ಸಾರ್ವಜನಿಕರ ಸಹಾಯ ಮತ್ತು ಸುರಕ್ಷತಾ ಸಂಬಂಧಿತ ಪ್ರಶ್ನೆಗಳಿಗೆ ಲಭ್ಯವಿರಲಿವೆ.

**ಸಾರ್ವಜನಿಕರು, ಭಕ್ತರು ಹಾಗೂ ಗಣೇಶೋತ್ಸವ ಸಮಿತಿಗಳಿಗೆ ಭರವಸೆ ನೀಡಿದ ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಪಾಟೀಲ್ ಹರವಾಳ್ ಅವರು, ಹಬ್ಬದ ಅವಧಿಯಲ್ಲಿ ಜೆಸ್ಕಾಂ ನ ಸಂಪೂರ್ಣ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ಸಾರ್ವಜನಿಕರಿಗೆ ನಿರಂತರವಾಗಿ ಲಭ್ಯವಿರಲಿದ್ದಾರೆ ಎಂದು ತಿಳಿಸಿದ್ದಾರೆ.**

ನಿರ್ಬಂಧಿಸಲಾಗಿದೆ. ತುರ್ತು ವಿದ್ಯುತ್ ದೋಷಗಳು ಉಂಟಾದಲ್ಲಿ ತಕ್ಷಣವೇ ವಿದ್ಯುತ್ ಪೂರೈಕೆಯನ್ನು ಪುನಃಸ್ಥಾಪಿಸಲು ತುರ್ತು ದುರಸ್ತಿ ತಂಡಗಳನ್ನು ಸನ್ನದ್ಧವಾಗಿಡಲಾಗಿದೆ.ಗಣೇಶೋತ್ಸವ ಆಯೋಜಕರು, ನಿವಾಸಿಗಳ ಸಂಘಗಳು ಸಾರ್ವಜನಿಕರು ವಿದ್ಯುತ್ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜೆಸ್ಕಾಂ ಮನವಿ ಮಾಡಿದೆ.

ಗಣೇಶೋತ್ಸವ ಮಂಟಪಗಳಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಅಧಿಕೃತ ಪ್ರಕ್ರಿಯೆಯ ಮೂಲಕವೇ ಪಡೆಯಬೇಕು ಹಾಗೂ ಅಗತ್ಯವಿರುವ ಸಂದರ್ಭಗಳಲ್ಲಿ ತಾಂತ್ರಿಕ ಸಿಬ್ಬಂದಿಯ ನೆರವನ್ನು ಪಡೆದುಕೊಳ್ಳುವಂತೆ ಆಯೋಜಕರಿಗೆ ಸೂಚಿಸಲಾಗಿದೆ.

# ಶೀಘ್ರದಲ್ಲಿ ಯಲಬುರ್ಗಾ ತಾಲ್ಲೂಕನ್ನೂ ಬರ ಪೀಡಿತ ತಾಲ್ಲೂಕು ಎಂದು ಘೋಷಿಸಲಾಗುವುದು: ಸಚಿವ ಬಸವರಾಜ ರಾಯರಡ್ಡಿ.

• **ಉದಯವಾಹಿನಿ ಯಲಬುರ್ಗಾ :**

ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ ಬಸವರಾಜ ರಾಯರಡ್ಡಿ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಹಿರೇವಂಕಲಕುಂಟಾ ಗ್ರಾಮದಲ್ಲಿ ಸಂಚರಿಸಿ ಜನ ಸಂದರ್ಶನ ಕಾರ್ಯಕ್ರಮ ನಡೆಸಿದರು.

ಶೀಘ್ರದಲ್ಲಿ ಯಲಬುರ್ಗಾ ತಾಲ್ಲೂಕನ್ನೂ ಬರ ಪೀಡಿತ ತಾಲ್ಲೂಕು ಎಂದು ಘೋಷಿಸಲಾಗುವದು ರೈತರಿಗೆ ಹಾಗೂ ಜನರಿಗೆ ಅಗತ್ಯ ನೆರವು ಕಲ್ಪಿಸಲಾಗುವುದು ಎಂದು ಹೇಳಿದರು. ರಾಜ್ಯದಲ್ಲಿ ಎದುರಾಗಿರುವ ಭೀಕರ ಬರಗಾಲದ ಹಿನ್ನೆಲೆಯಲ್ಲಿ ಗಂಗಾವತಿ, ಕುಕನೂರು, ಕನಕಗಿರಿ ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ.

ತಾಲ್ಲೂಕಿನ ಹಿರೇವಂಕಲಕುಂಟಾ ಗ್ರಾಮದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯಡಿ ಸರಕಾರಿ ಪದವಿ ಪೂರ್ವ ಕಾಲೇಜ್ ಪ್ರೌಢಶಾಲೆ ವಿಭಾಗದ ನೂತನವಾಗಿ ನಿರ್ಮಾಣ ಗೊಂಡ ನಾಲ್ಕು ಕೊಠಡಿಗಳನ್ನ ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ಕ್ಷೇತ್ರದಲ್ಲಿ ಈ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ. ಡಿ,ಕೆ ಶಿವಕುಮಾರ ಮತ್ತು ನನ್ನನ್ನು ಸೇರಿ 24 ಕೆರೆಗಳನ್ನು ತುಂಬಿಸಲಾಗಿದೆ ಇನ್ನೂ ಯಲಬುರ್ಗಾ–ಕುಕನೂರು ಭಾಗದಲ್ಲಿನ 34 ಕೆರೆಗಳನ್ನು ತುಂಬಿಸುವದಾಗಿ ಹೇಳಿದರು ಈ ಕ್ಷೇತ್ರದಲ್ಲಿ ಬಿಜೆಪಿ ಪಕ್ಷದವರ ಕೊಡುಗೆ ಏನು ಎಂದು ಪ್ರಶ್ನಿಸಿದರು.

ತಾಲ್ಲೂಕಿನಲ್ಲಿ ಅನ್ನಭಾಗ್ಯ ಯೋಜನೆರಡಿ 2.ಲಕ್ಷ 36.ಸಾವೀರ ಜನರಿಗೆ ಆಹಾರ ಧಾನ್ಯ ವಿತರಣೆ ಮಾಡಲಾಗಿದೆ

ಉದಯವಾಹಿನಿ ಚಿತ್ರ


ಹಿರೇವಂಕಲಕುಂಟಾ ಗ್ರಾಮದಲ್ಲಿ ವಸತಿ ನಿಲಯ ಗ್ರಾಮದಲ್ಲಿ 110 ಕೆ. ವಿ ಸ್ಥಾಪನೆ ಕಾಮಗಾರಿ ಆರಂಭವಾಗಿದೆ,ದ್ಯಾಂಪೂರ ಮಾದರಿಯಲ್ಲಿ ಹಿರೇವಂಕಲಕುಂಟಾ ಗ್ರಾಮದಲ್ಲಿ ಇನ್ನೊಂದು ಮಿನಿ ಬಸ್ ನಿಲ್ದಾಣ. ನಿರ್ಮಾಣ ಮಾಡಿಕೊಡುವದಾಗಿ ಹೇಳಿದರು.

ರಾಜ್ಯದಲ್ಲಿ 1ಕೋಟಿ 52 ಲಕ್ಷ ಜನ ವಿದ್ಯಾರ್ಥಿಗಳಿಗೆ ಯುವ ನಿಧಿ. ಹಾಗೂ ಗ್ಯಾರಂಟಿ ಯೋಜನೆ ಶಕ್ತಿಯೋಜನೆ ಜಾರಿಗೆ ತರಲಾಗಿದೆ. ಹಿರೇವಂಕಲಕುಂಟ ಗ್ರಾಮದಲ್ಲಿ ವಸತಿ ನಿಲಯ ಪ್ರಾರಂಭಿಸಲಾಗುವದು ಬೇವೂರು ಗ್ರಾಮದಲ್ಲಿ 360 ವಿದ್ಯಾರ್ಥಿಗಳು ವ್ಯಾಸಾಂಗ ಮಾಡಲು ರೇಸಿಡೆನ್ಸಿ ಕಾಲೇಜ್ ಆರಂಭಿಸಲಾಗುವದು.

ಕ್ಷೇತ್ರದಲ್ಲಿಈ ಹಿಂದೆ 24 ಕೆರೆಗಳನ್ನು ತುಂಬಿಸಲಾಗಿತ್ತು. ಪ್ರಸ್ತುತ ರೂ. 970 ಕೋಟಿ ವೆಚ್ಚದಲ್ಲಿ ಕೃಷ್ಣಾ ನದಿಯಿಂದ ಯಲಬುರ್ಗಾ–ಕುಕನೂರು ಭಾಗದಲ್ಲಿನ 34 ಕೆರೆಗಳನ್ನು ತುಂಬಿಸುವ ಯೋಜನೆಗೆ ಟೆಂಡರ್ ಪ್ರಕ್ರಿಯೆ ಪ್ರಾರಂಭಗೊಂಡಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ. ಎರೆ ಭಾಗದ ಸುಮಾರು 23 ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಲು ರೂ. 125 ಕೋಟಿ ವೆಚ್ಚದ ಯೋಜನೆ ರೂಪಿಸಲಾಗಿದೆ. ತುಂಗಭದ್ರಾ ನದಿಯಿಂದ ಡಿಬಿಓಟಿ ಮೂಲಕ ನೀರು ಒದಗಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ ಎಂದರು.

ಕ್ಷೇತ್ರದ ರಸ್ತೆಗಳ ಸುಧಾರಣೆಗೆ ಆದ್ಯತೆ ನೀಡಲಾಗಿದ್ದು, ಮುಂಡರಗಿ–ರಾಜೂರು–ಯಲಬುರ್ಗಾ ಸಂಪರ್ಕ ರಸ್ತೆಗಳ ಡಾಂಬರೀಕರಣ ಹಾಗೂ ದುರಸ್ತಿ ಕಾಮಗಾರಿಗಳು ಅಕ್ಟೋಬರ್ ನಿಂದ ಚುರು ಕುಗೊಳ್ಳಲಿವೆ. ಸಂಕನೂರು, ಮುಧೋಳ, ಯಲಬುರ್ಗಾ ಮಾರ್ಗದ ರಸ್ತೆಗಾಗಿ ರೂ. 400 ಕೋಟಿ ಅನುದಾನ ಮೀಸಲಿಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮುಖಂಡರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆರಬಸಪ್ಪ ನಿಡಗುಂದಿ. ರಾಘವೇಂದ್ರ ಚಾರ್ಯ ಜೋಷಿ. ಮಹೇಶ ಹಳ್ಳಿ ಶಿವನಗೌಡ ದಾನರಡ್ಡಿ. ನಜೀರಮೀಯಾ ಕುಷ್ಟಗಿ. ನಾಗರಾಜ ನವಲಹಳ್ಳಿ ಹನಮೇಶ ಹುಣಶಿಹಾಳ.ಈಶ್ವರ ಅಟಮಾಳಗಿ. ಕುಂಟೇಪ್ಪ ಕಂಬಳಿ ಮಹೇಶಗೌಡ ಮಾಲಿ ಪಾಟೀಲ್ ವೀರಭದ್ರಪ್ಪ ಶೆಟ್ಟರ ಹೇಮರಡ್ಡಿ ರಡ್ಡೆರ. ಅಧಿಕಾರಿಗಳಾದ, ಕುಕನೂರು ತಾ.ಪಂ ಇಓ ಬೆಟದೇಶ ಮಾಳೆಕೊಪ್ಪ ಕೆ.ಆರ್.ಐ.ಡಿ.ಎಲ್ ಅಧಿಕಾರಿ ಅನಿಲ್ ಪಾಟೀಲ, ಲೋಕೋಪಯೋಗಿ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ, ಅಶೋಕ ಗೌಡ್ರ ಇತರೆ ಜನಪ್ರತಿನಿಧಿಗಳು, ಗ್ರಾಮಸ್ಥರು, ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು..

# ಅರಣ್ಯ ಇಲಾಖೆ ಭರ್ಜರಿ ಕಾರ್ಯಾಚರಣೆ: ಭಾರೀ ಪ್ರಮಾಣದ ವನ್ಯಜೀವಿ ವಸ್ತುಗಳ ವಶ, ಇಬ್ಬರ ಬಂಧನ!

• **ಉದಯವಾಹಿನಿ ಯಲ್ಲಾಪುರ:**



ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ ಅರಣ್ಯ ಇಲಾಖೆ ಹಾಗೂ ಸಿರ್ಸಿ ಫಾರೆಸ್ಟ್ ಮೊಬೈಲ್ ಸ್ಕ್ವಾಡ್ ನಡೆಸಿದ ಮಹತ್ವದ ಕಾರ್ಯಾಚರಣೆಯಲ್ಲಿ ಇಬ್ಬರು ಬೇಟೆಗಾರರ ಬಂಧಿಸಿ, ಭಾರೀ ಪ್ರಮಾಣದ ವನ್ಯಜೀವಿ ಉತ್ಪನ್ನಗಳನ್ನು ವಶಪಡಿಸಿಕೊಳ್ಳಲಾಗಿದೆ. ವನ್ಯಜೀವಿಗಳ ಬೇಟೆ ಹಾಗೂ ಅಕ್ರಮ ಸಾಗಾಟದ ಬಗ್ಗೆ ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಅಧಿಕಾರಿಗಳು ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರಾಥಮಿಕ ತನಿಖೆಯಲ್ಲಿ ಬಂಧಿತರು ಗೋವಾ ಹಾಗೂ ಉತ್ತರ ಕನ್ನಡದ ಅರಣ್ಯ ಪ್ರದೇಶಗಳಲ್ಲಿ ವನ್ಯಜೀವಿಗಳನ್ನು ಬೇಟೆಯಾಡುತ್ತಿದ್ದ ತಂಡವೊಂದರ ಭಾಗವಾಗಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಆರೋಪಿಗಳಿಂದ ವಿವಿಧ ರೀತಿಯ ವನ್ಯಜೀವಿ ಉತ್ಪನ್ನಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಅವುಗಳ ಮೂಲ ಬೇಟೆಯ ಚಟುವಟಿಕೆಗಳ ಕುರಿತು ಅರಣ್ಯಾಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ. ವನ್ಯಜೀವಿ ಬೇಟೆ, ಅಕ್ರಮ ಸಾಗಾಟ ಹಾಗೂ ವನ್ಯಜೀವಿ ಉತ್ಪನ್ನಗಳ ಮಾರಾಟದಲ್ಲಿ ತೊಡಗಿರುವ ಜಾಲವನ್ನು ಪತ್ತೆಹಚ್ಚಲು ತನಿಖೆ ಚುರುಕುಗೊಂಡಿದೆ.

ಈ ಪ್ರಕರಣದಲ್ಲಿ ಇನ್ನಷ್ಟು ಮಂದಿ ಭಾಗಿಯಾಗಿರುವ ಸಾಧ್ಯತೆಯಿದ್ದು, ಅವರಿಗಾಗಿ ಶೋಧ ಕಾರ್ಯ ಮುಂದುವರಿದಿದೆ.ಕಾರ್ಯಾಚರಣೆಯನ್ನು ಅರಣ್ಯ ಇಲಾಖೆ ಹಾಗೂ ಸಿರ್ಸಿ ಫಾರೆಸ್ಟ್ ಮೊಬೈಲ್ ಸ್ಕ್ವಾಡ್ ಅಧಿಕಾರಿಗಳು ಮತ್ತು ಸಿಬ್ಬಂದಿ ನಡೆಸಿದ್ದಾರೆ. ವನ್ಯಜೀವಿ ಸಂರಕ್ಷಣಾ ಕಾನೂನುಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಳ್ಳಲಾಗಿದೆ.

# ಜ್ವಲಂತ ಸಮಸ್ಯೆಗಳು ಪರಿಹರಿಸುವಂತೆ ಕೆ.ಆರ್.ಎಸ್ ಪಕ್ಷದಿಂದ ಶಾಸಕರಿಗೆ ಮನವಿ ಸಲ್ಲಿಕೆ

• **ಉದಯವಾಹಿನಿ,ಚಿಂಚೋಳಿ**

ಉದಯವಾಹಿನಿ ಚಿತ್ರ


ತಾಲ್ಲೂಕಿನ ಜ್ವಲಂತ ಸಮಸ್ಯೆಗಳು, ಬರಪೀಡಿತ ಪ್ರದೇಶದಿಂದ ಕೈ ಬಿಟ್ಟಿರುವುದು ಖಂಡಿಸಿ ಮತ್ತು ತಾಲ್ಲೂಕಿನ ಸರಕಾರಿ ಜಮೀನುಗಳನ್ನು ಭೂಗಳ್ಳರು ಕಬಳಿಸಿದ್ದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮನವಿ ಸಲ್ಲಿಸಿದ್ದು ಬೇಡಿಕೆ ಪರಿಹರಿಸದೆ ಇದ್ದಲ್ಲಿ ಕೆಆರ್ ಎಸ್ ಪಕ್ಷದಿಂದ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಕೆಆರ್ ಎಸ್ ಪಕ್ಷದ ಜಿಲ್ಲಾಧ್ಯಕ್ಷ ಸಚಿನ್ ಚವ್ಹಾಣ ಹೇಳಿದರು.ಪ್ರಜಾಸೇವೆ ಕಾರ್ಯಕ್ರಮದಲ್ಲಿ ಶಾಸಕ ಡಾ.ಅವಿನಾಶ ಜಾಧವ ಅವರಿಗೆ ಕೆಆರ್ ಎಸ್ ಪಕ್ಷದಿಂದ ವಿವಿಧ ಜ್ವಲಂತ ಸಮಸ್ಯೆಗಳ ಕುರಿತು ಮನವಿ ಸಲ್ಲಿಸಿದ ಅವರು,ಕುಂಚಾವರಂ ವ್ಯಾಪ್ತಿಯ ಶಾಧಿಪೂರ ವ್ಯಾಪ್ತಿಯಲ್ಲಿ ಎಗ್ಗಿಲ್ಲದೆ ಕೇಂಪುಮಣ್ಣು ಸಾಗಾಣಿಕೆ ತಡೆಗಟ್ಟಲು ವಿಫಲವಾದ ಗಣಿ ಭೂಇಲಾಖೆ ಅಧಿಕಾರಿಗಳಿಗೆ ವಿರುದ್ಧ ಕ್ರಮಕೈಗೊಳ್ಳಬೇಕು,ಸರ್ಕಾರಿ ಜಮೀನು ಭೂಕಬಳಿಗೆ ಸರ್ವೇ ನಂ.31/4 ಛತ್ರಸಾಲ 152/16ಮತ್ತು 152/17ಸೋಮನಿಂಗದಳ್ಳಿ ಜಮೀನು ಆಕ್ರಮವಾಗಿ ಕಬಳಿಸಿದ್ದು ಸರ್ಕಾರದ ವಶಕ್ಕೆ ಪಡೆದುಕೊಳ್ಳಬೇಕು. ಸುಲೇಪೇಟ,ದಸ್ತಾಪೂರ,ರಟಕಲ್,ಕುಂಚಾವರಂ ರಸ್ತೆಗಳು ತೀವ್ರ ಹದಗೆಟ್ಟಿವೆ ದುರಸ್ತಿಗೊಳಿಸಬೇಕು,ಸರ್ಕಾರಿ ನೌಕರರು ಐಡಿ ಕಾರ್ಡ್ ಧರಿಸಬೇಕು,ಪಿಡಿಒಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುತ್ತಿಲ್ಲ,ಸಾರ್ವಜನಿಕರ ಕರೆಗಳಿಗೆ ಸ್ಪಂದಿಸುತ್ತಿಲ್ಲ ಅಂಥವರ ವಿರುದ್ಧ ಕ್ರಮಕೈಗೊಳ್ಳಬೇಕು,ವಿಧ್ಯಾರ್ಥಿಗಳಿಗೆ

ಬಸ್ಸಿನ ವ್ಯವಸ್ಥೆ ಮಾಡಬೇಕು,ಶಾಸಕರು ರೈತರ ಸಾಲಮನ್ನಾ ಮಾಡುವಂತೆ ಅಧಿವೇಶನದಲ್ಲಿ ಧ್ವನಿ ಎತ್ತಬೇಕು,ವಸತಿನಿಲಯಗಳಲ್ಲಿ ಸರ್ಕಾರದ ಮಾರ್ಗಸೂಚಿಗಳು ಪಾಲನೆ ಮಾಡಬೇಕು ಎಂಬ ಮನವಿಯನ್ನು ಕೆಆರ್ ಎಸ್ ಪಕ್ಷದ ಜಿಲ್ಲಾಧ್ಯಕ್ಷ ಸಚಿನ್ ಚವ್ಹಾಣ ನೇತೃತ್ವದಲ್ಲಿ ನೀಡಲಾಯಿತು.ಮೋಸೀನ್ ಪಟೇಲ್,ಸೀತಾರಾಮ ಪವ್ಹಾರ,ದಿನೇಶ್ ಜಾಧವ,ಸದಾನಂದ ರಾಠೋಡ್,ಜೇಮಸಿಂಗ್ ಮಹಾರಾಜ್ ,ಆನಂದ ಚವ್ಹಾಣ ಅನೇಕರಿದರು.


# ಗ್ರಿಡ್ ಗೆ ಪಡೆದು ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡಿ ಭಾರತೀಯ ಕಿಸಾನ್ ಸಂಘದಿಂದ ಮನವಿ

• **ಉದಯವಾಹಿನಿ ಬೀಳಗಿ:**

ಬಾಗಲಕೋಟೆ ಜಿಲ್ಲೆಯಲ್ಲಿ ಮಳೆಯ ಕೊರತೆಯಿಂದ ಸಂಕಷ್ಟದಲ್ಲಿರುವ ರೈತರ ಬಿತ್ತಿದ ಬೆಳೆಗಳನ್ನು ರಕ್ಷಿಸಲು ಸಮಯಕ್ಕೆ ಸರಿಯಾಗಿ ಸಮರ್ಪಕ ವಿದ್ಯುತ್ ಪೂರೈಕೆ ಮಾಡಲು ಎನ್‌ಟಿಪಿಸಿ ಹಾಗೂ ಸಕ್ಕರೆ ಕಾರ್ಖಾನೆಗಳಿಂದ ಮತ್ತು ವಿಂಡ್ ಪವರ, ಸೋಲಾರ್ ನಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಸೂಕ್ತ ವ್ಯವಸ್ಥೆಯ ಮೂಲಕ ಗ್ರಿಡ್‌ಗೆ ಪಡೆದು, ಜಿಲ್ಲೆಯ ಕೃಷಿ ಪಂಪ್‌ಸೆಟ್‌ಗಳಿಗೆ ಆದ್ಯತೆಯ ಮೇರೆಗೆ ಪೂರೈಸಬೇಕು ಎಂದು ಭಾರತೀಯ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ ವಿರುಪಾಕ್ಷಯ್ಯ ಹಿರೇಮಠ ಸರಕಾರಕ್ಕೆ ಒತ್ತಾಯಿಸಿದರು.

ಭಾರತೀಯ ಕಿಸಾನ್ ಸಂಘ ಕರ್ನಾಟಕ ಪ್ರದೇಶ ಉತ್ತರ ಪ್ರಾಂತ ಜಿಲ್ಲಾ ಹಾಗೂ ತಾಲ್ಲೂಕು ಘಟಕದ ಪದಾಧಿಕಾರಿಗಳು ಆಡಳಿತ ಸೌಧಕ್ಕೆ ಆಗಮಿಸಿ ಗ್ರೇಡ್ 2 ತಹಶೀಲ್ದಾರ ಸಂಗಮೇಶ ಚರಂತಿಮಠ ಹಾಗೂ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಮಂಜುನಾಥ ಬೂಕೆ ಮೂಲಕ ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ವಿದ್ಯುತ್ ಸಮಸ್ಯೆ ನಿವಾರಣೆಗೆ ತ್ವರಿತ ಗತಿಯಲ್ಲಿ ಕ್ರಮ ಕೈಗೊಳ್ಳಬೇಕು ಮನವಿ ಸಲ್ಲಿಸಿದರು.

ಆರ್‌ಟಿಪಿಎಸ್, ಬಿಟಿಪಿಎಸ್ ಸೇರಿದಂತೆ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಉತ್ಪಾದನಾ ಸಮಸ್ಯೆ ಇದ್ದಲ್ಲಿ

ಉದಯವಾಹಿನಿ ಚಿತ್ರ


ಸಮಯಕ್ಕೆ ಸರಿಯಾಗಿ ಸಮರ್ಪಕ ವಿದ್ಯುತ್ ಪೂರೈಕೆ

ಪರ್ಯಾಯ ಮೂಲಗಳಿಂದ ವಿದ್ಯುತ್ ಖರೀದಿಸಿ ಕೃಷಿ ಬಳಕೆಗೆ ವಿದ್ಯುತ್ ಕೊರತೆಯಾಗದಂತೆ ಕ್ರಮ ಕೈಗೊಳ್ಳಬೇಕು. ಕೃಷಿ ವಿದ್ಯುತ್ ಪೂರೈಕೆಯಲ್ಲಿ ಲೋಡ್ ಶೆಡ್ಡಿಂಗ್ ಅಥವಾ ವ್ಯತ್ಯಯ ಉಂಟಾದರೆ ರೈತರಿಗೆ ಮುಂಚಿತವಾಗಿ ಮಾಹಿತಿ ನೀಡಬೇಕು ಹಾಗೂ ನಿಗದಿತ ಸಮಯದಲ್ಲಿ ವಿದ್ಯುತ್ ಪೂರೈಕೆ ಖಚಿತಪಡಿಸಬೇಕು ಎಂದು ಹಿರೇಮಠ ಆಗ್ರಹಪಡಿದರು.

ಉತ್ತರ ಪ್ರಾಂತ ಕಾರ್ಯಕಾರಿಣಿ ಸದಸ್ಯ ಸುಬ್ಬರಾಯಗೌಡ ಪಾಟೀಲ ಮಾತನಾಡಿ ಫೀಡರ್‌ಗಳು, ವಿದ್ಯುತ್ ಪರಿವರ್ತಕಗಳು, ಕಂಬಗಳು ಹಾಗೂ ತಂತಿಗಳಲ್ಲಿ ಉಂಟಾಗುವ ದೋಷಗಳನ್ನು ತುರ್ತುಗತಿಯಲ್ಲಿ ದುರಸ್ತಿ ಮಾಡಬೇಕು, ಬರ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು

ಈಗಾಗಲೇ ಬಿತ್ತನೆ ಮಾಡಿರುವ ಅಳಿದುಳಿದ ಬೆಳೆಗಳನ್ನು ಉಳಿಸಿಕೊಳ್ಳಲು ತಕ್ಷಣ ವಿಶೇಷ ವಿದ್ಯುತ್ ಪೂರೈಕೆ ಮಾಡಿ, ರೈತರಿಗೆ ಬೆಳೆಗಳಿಗೆ ನೀರು ಹಾಯಿಸಲು ಅನುಕೂಲ ಮಾಡಿಕೊಡಬೇಕು.ಮೂರು ದಿನಗಳ ಗಡುವಿನೊಳಗೆ ಕೃಷಿ ವಿದ್ಯುತ್ ಪೂರೈಕೆಯನ್ನು ಸಮರ್ಪಕಗೊಳಿಸದಿದ್ದರೆ, ಭಾರತೀಯ ಕಿಸಾನ ಸಂಘದ ನೇತೃತ್ವದಲ್ಲಿ ರೈತರನ್ನು ಸಂಘಟಿಸಿ ಕಾತರಕಿ ವಿದ್ಯುತ್ ಸ್ಟೇಷನ್‌ಗೆ ಮುತ್ತಿಗೆ ಹಾಕಿ ತೀವ್ರ ಪ್ರತಿಭಟನೆ ನಡೆಸಲಾಗುವುದು.
**ಮಲ್ಲಪ್ಪ ಗಾಣಿಗೇರ**
**ತಾಲ್ಲೂಕು ಅಧ್ಯಕ್ಷರು ಬಿ.ಕೆ.ಎಸ್ ಬೀಳಗಿ**

ಜಿಲ್ಲೆಗೆ ವಿಶೇಷ ಕೃಷಿ ವಿದ್ಯುತ್ ಪೂರೈಕೆ ವ್ಯವಸ್ಥೆ ಕಲ್ಪಿಸಬೇಕು. ವಿದ್ಯುತ್ ಕೊರತೆ ಅಥವಾ ತಾಂತ್ರಿಕ ಕಾರಣಗಳನ್ನು ನೆಪ ಮಾಡಿಕೊಂಡು ಕೃಷಿ ವಿದ್ಯುತ್ ಪೂರೈಕೆಯಲ್ಲಿ ಅನಗತ್ಯ ವ್ಯತ್ಯಯ ಉಂಟಾಗದಂತೆ ಹೆಸ್ಕಾಂ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಗೋಪಾಲ ಕಮ್ಮನ್ನವರ,ಸಂಗನಗೌಡ ಪಾಟೀಲ, ಅಬ್ದುಲ್ ಹಲವಾಯಿ, ಜಂಗಪ್ಪ ಕಲ್ಲಾರಿ ಡೋಂಗ್ರಿಸಾಬ ನದಾಫ, ಹಣಮಂತ ದೊರೆಗೊಳ ಅಜಿತ ನಾಯಕ ಸೇರಿದಂತೆ ಅನೇಕರು ಇದ್ದರು.

# ಕಟ್ಟಡ ಹಾಗೂ ಇತರೆ ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಿಸಿದ ಸಚಿವ ಲಕ್ಷ್ಮಣ ಸವದಿ

• **ಉದಯವಾಹಿನಿ ಅಥಣಿ :**

ಉದಯವಾಹಿನಿ ಚಿತ್ರ


ಕಾರ್ಮಿಕ ಇಲಾಖೆ ಹಾಗೂ ಕರ್ನಾಟಕ ಕಟ್ಟಡ ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿವತಿಯಿಂದ 2026–27ನೇ ಸಾಲಿನಡಿ ಮಂಜೂರಾದ1,118 ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರಿಗೆ ಸುರಕ್ಷತಾ ಕಿಟ್‌ಗಳನ್ನು ಸಹಕಾರ ಸಚಿವ ಲಕ್ಷ್ಮಣ ಸವದಿ ಅವರು ಪಟ್ಟಣದ ನಿರೀಕ್ಷಣಾ ಮಂದಿರದ ಆವರಣದಲ್ಲಿ ವಿತರಿಸಿದರು.ಭೌಗೋಳಿಕನಕ್ಷೆ ಅನ್ವೇಷಿಸಿ ವಿವಿಧ ವೃತ್ತಿಯ ಕಾರ್ಮಿಕರಿಗೆ ವೃತ್ತಿಗೆ ಅನುಗುಣವಾಗಿ ಕಿಟ್ ವಿತರಿಸಲಾಯಿತು.

ಇದರಲ್ಲಿ ಎಲೆಕ್ಟ್ರಿಷಿಯನ್ 167, ಪ್ಲಂಬರ್ 75, ಕಾಪೆರ್ಂಟರ್ 98, ಮೇಸನ್ 600, ವೆಲ್ಡರ್ 98 ಹಾಗೂ ಪೇಂಟರ್ 80 ಸೇರಿದಂತೆ ಒಟ್ಟು 1,118 ಕಾರ್ಮಿಕರು ಸೌಲಭ್ಯ ಪಡೆದರು.

ಕಿಟ್ ವಿತರಿಸಿ ಸಹಕಾರ ಸಚಿವ ಲಕ್ಷ್ಮಣ ಸವದಿ ಅವರು ಕಟ್ಟಡ ನಿರ್ಮಾಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಮಿಕರು ಜೀವದ ಹಂಗು ತೊರೆದು ದುಡಿಯುತ್ತಿದ್ದಾರೆ. ಅವರ ಸುರಕ್ಷತೆ ಮತ್ತು ಕಲ್ಯಾಣಕ್ಕೆ ನಮ್ಮ ಸರ್ಕಾರ ಹೆಚ್ಚಿನ ಆದ್ಯತೆ ನೀಡುತ್ತಿದೆ. ಕೆಲಸದ ಸ್ಥಳದಲ್ಲಿ ಅಪಘಾತ ತಡೆಗಟ್ಟಲು ಸುರಕ್ಷತಾ ಪರಿಕರಗಳನ್ನು ಕಡ್ಡಾಯವಾಗಿ ಉಪಯೋಗಿಸಬೇಕು.ಅರ್ಹ ಫಲಾನುಭವಿಗಳಿಗೆ ಸರ್ಕಾರದ ಎಲ್ಲಾ ಯೋಜನೆಗಳು ತಲುಪುವಂತೆ ಮಾಡಲಾಗುವುದು ಎಂದರು.ಕಾರ್ಮಿಕರ ಮಕ್ಕಳ ಶಿಕ್ಷಣ, ಆರೋಗ್ಯ, ವಸತಿ ಮತ್ತು ಸಾಮಾಜಿಕ ಭದ್ರತೆಗಾಗಿ ಕಲ್ಯಾಣ ಮಂಡಳಿಯು ಹಲವು ಯೋಜನೆಗಳನ್ನು ಜಾರಿಗೊಳಿಸಿದ್ದು, ಅರ್ಹ ಕಾರ್ಮಿಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

# ದಾವಣಗೆರೆ, ಚಿತ್ರದುರ್ಗಕ್ಕೆ ನೀರು –ಸೆ.10 ರವರೆಗೆ ನಾಲೆಯಲ್ಲಿ ಹರಿಯಲಿದೆ ನೀರು

### ಟಿವಿ ಸ್ಟೇಷನ್ ಕೆರೆಯಲ್ಲಿ 6 ಅಡಿ ನೀರಿದೆ, ಕುಂದುವಾಡ ಕೆರೆಯಲ್ಲಿ 5 ಅಡಿ ನೀರಿದೆ. ಸದ್ಯಕ್ಕೆ ಈ ಎರಡೂ ಕೆರೆಗಳ ನೀರು ಬಳಸುತ್ತಿಲ್ಲ

• **ಉದಯವಾಹಿನಿ ದಾವಣಗೆರೆ:**

ಮಳೆಯಿಲ್ಲದೆ ಬರ ಆವರಿಸಿರುವ ಮಳೆಗಾಲದ ದಿನಗಳಲ್ಲೂ ಅನೇಕ ಕಡೆ ನೀರಿನ ತತ್ವಾರ ಶುರುವಾಗಿ ಪ್ರತಿಭಟನೆಗಳು ನಡೆದಿದ್ದವು. ಈ ಹೊತ್ತಿನಲ್ಲಿ ಭದ್ರೆ ನೀರು ಆಸರೆಯಾಗಿ ಹರಿಯುತ್ತಿದ್ದು, ಅವಳಿ ಜಿಲ್ಲೆಯ ನೂರಾರು ಹಳ್ಳಿ, ನಗರ, ಪಟ್ಟಣಗಳ ಜನರ ದಾಹ ತೀರಿಸುತ್ತಿದೆ.

ಮಳೆ ಕೊರತೆ ಹಿನ್ನೆಲೆಯಲ್ಲಿ ಅವಿಭಜಿತ ದಾವಣಗೆರೆ–ಚಿತ್ರದುರ್ಗ ನಗರ ಎರಡೂ ಜಿಲ್ಲೆಯ ನೂರಾರು ಹಳ್ಳಿಗಳಲ್ಲಿ ಕುಡಿಯುವ

1 : ಕುಡಿಯುವ ನೀರಿಗೆ 2 ಟಿಎಂಸಿ
2 : ಕುಂದುವಾಡ ಕೆರೆಗೆ ನೀರು
3 : ನೀರು ಒದಗಿಸುವ 13 ಬಹುಗ್ರಾಮ

ನೀರಿನ ಸಮಸ್ಯೆ ಆಗುವ ಸಾಧ್ಯತೆಯಿತ್ತು.

ದಾವಣಗೆರೆ ಮಹಾನಗರ ಪಾಲಿಕೆಯಿಂದ ಕುಡಿಯುವ ನೀರಿನ ಉದ್ದೇಶಕ್ಕಾಗಿ ನಾಲೆಯಲ್ಲಿ ನೀರು ಹರಿಸಲು ಮನವಿ ಮಾಡಲಾಗಿತ್ತು. ಈಗ ನೀರುಸೂಳೆಕೆರೆ ಮತ್ತು ದಾವಣಗೆರೆಯ ಎರಡು ಕೆರೆಗಳಿಗೆ ನೀರು ಹರಿಯುತ್ತಿದೆ. ಕುಡಿಯುವ ನೀರು ಬಳಕೆಗೆ ಮೀಸಲಿಟ್ಟಿರುವ ಕೆರೆ ಮತ್ತು ಟ್ಯಾಂಕ್‌ಗಳಿಗೆ ಸೆ.10 ರವರೆಗೆ ನೀರು ಹರಿಯಲಿದ್ದು, ಮುಂದಿನ ಮೂರು ತಿಂಗಳು ಕುಡಿಯುವ ನೀರಿಗೆ ಸಮಸ್ಯೆ ಇಲ್ಲದಂತಾಗಲಿದೆ.


ಉದಯವಾಹಿನಿ ಚಿತ್ರ

ಭದ್ರಾ ನಾಲೆ ಅವಲಂಭಿಸಿ ಜಿಲ್ಲೆಯಲ್ಲಿ 207 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ 13 ಬಹುಗ್ರಾಮ ಕುಡಿಯುವ ನೀರು ಯೋಜನೆಗಳನ್ನು ರೂಪಿಸಲಾಗಿದೆ. ಈ ಕಾರಣಕ್ಕೆ ನಾಲೆಗೆ ಹರಿಸುವ ನೀರಿನಲ್ಲಿ ವಾರ್ಷಿಕ 2 ಟಿಎಂಸಿ ನೀರನ್ನು ಕುಡಿಯುವ ನೀರಿಗೆ ಮೀಸಲಿಡಲಾಗಿದೆ. ಇಷ್ಟು ವರ್ಷ ಡ್ಯಾಂ ತುಂಬುತ್ತಿದ್ದರಿಂದ ನಾಲೆಯಲ್ಲಿ ಭತ್ತದ ಬೆಳೆಗೆ ನೀರು ಹರಿಸಲಾಗುತ್ತಿತ್ತು. ಆಗ ಕುಡಿಯುವ ನೀರಿಗೆ ಮೀಸಲಿಟ್ಟ ನೀರನ್ನು ಅದರಲ್ಲಿಯೇ ಬಳಸಿಕೊಳ್ಳುತ್ತಿದ್ದರಿಂದ ಅದರ ತೀವ್ರತೆ ಕಂಡು ಬರುತ್ತಿರಲಿಲ್ಲ. ಈ ಬಾರಿ ಬರ ಆವರಿಸಿರುವುದರಿಂದ ನಾಲೆಯಲ್ಲಿ ಕುಡಿಯುವ ನೀರಿಗಾಗಿಯೇ ನೀರು ಹರಿಸಲಾಗಿದೆ. ಎಲ್ಲಾ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಕೆರೆಗಳಲ್ಲಿಯೇ ನೀರಿನ ಶೇಖರಣೆಗೆ ವ್ಯವಸ್ಥೆ ಮಾಡಿದ್ದು, ಒಟ್ಟು 0.3 ಟಿಎಂಸಿ ನೀರು ಶೇಖರಿಸಿಕೊಳ್ಳುವ ಅವಕಾಶವಿದೆ. ಈ ನೀರು ಯೋಜನೆಗಳ 207 ಗ್ರಾಮಗಳಿಗೆ ಮುಂದಿನ ಮೂರು ತಿಂಗಳು ಕುಡಿಯುವ ನೀರಿನ ಸಮಸ್ಯೆ ಇರಲ್ಲ. ಬರದ ಈ ಹೊತ್ತಿನಲ್ಲಿ ಎರಡೂ ಜಿಲ್ಲೆಗಳಿಗೆ ಕುಡಿಯುವ ನೀರಿನ ಜೀವನಾಡಿಯಾಗಿರುವುದು ಚನ್ನಗಿರಿ ತಾಲೂಕಿನ ಸೂಳೆಕೆರೆ. ಈ ಕೆರೆ ನೀರು ಆಧರಿಸಿ ಚನ್ನಗಿರಿ ಪಟ್ಟಣ, ಬಸವಾಪಟ್ಟಣ, ಸಂತೆಬೆನ್ನೂರು, ಜಗಳೂರು ಹಾಗೂ ನೆರೆಯ ಹೊಳಲ್ಕೆರೆ, ಚಿತ್ರದುರ್ಗ, ಭರಮಸಾಗರ, ಮಲ್ಲಾಡಿಹಳ್ಳಿ, ಸಿರಿಗೆರೆ ಸೇರಿ ಒಟ್ಟು 150 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ 7 ಯೋಜನೆಗಳನ್ನು ರೂಪಿಸಲಾಗಿದೆ. ನೀರು ಹರಿಸಿದ ಮೇಲೆ 3 ಅಡಿ ನೀರು ಶೇಖರಣೆ ಆಗಿದ್ದು, ಈಗ ಕೆರೆಯಲ್ಲಿ 15 ಅಡಿ ನೀರಿದೆ. ಭದ್ರಾ ಡ್ಯಾಂನಿಂದ ಸೆ.1ರಿಂದ 10 ರವರೆಗೆ ಪ್ರತಿದಿನ 1500 ಕ್ಯುಸೆಕ್ ನೀರು ನಾಲೆಗೆ ಬಿಡಲಾಗಿದೆ. ಇದರಲ್ಲಿ ಆವಿ ಮತ್ತು

**ಮುಂದಿನ ಆರು ತಿಂಗಳು ಅವಲಂಭಿತ ಹಳ್ಳಿ, ಪಟ್ಟಣ, ನಗರಗಳಿಗೆ ಕುಡಿಯುವ ನೀರಿನ ಸಮಸ್ಯೆಯಿಲ್ಲ. ಮುಂದೆ ಇನ್ನೊಮ್ಮೆ ನೀರು ಹರಿಸಿದರೆ ಇಲ್ಲವೇ ಬೇಸಿಗೆ ಹಂಗಾಮು ಭತ್ತದ ಬೆಳೆಗೆ ನೀರು ಕೊಟ್ಟರೆ ಕುಡಿಯುವ ನೀರಿಗೂ ತೊಂದರೆ ಇರುವುದಿಲ್ಲ**

**ಕುಂದುವಾಡ, ಟಿವಿ ಸ್ಟೇಷನ್ ಎರಡೂ ಕೆರೆಗೆ ನಾಲೆ ನೀರು ತುಂಬಿಸಿಕೊಳ್ಳುತ್ತಿದ್ದು ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ಆಗುವುದಿಲ್ಲ. ನಾಲೆಯಲ್ಲಿ ನೀರು ಹರಿಸಿದ್ದು ಅನುಕೂಲ ಆಗಿದೆ ಎಂದಿದ್ದಾರೆ .**
**–ಮಹಾಂತೇಶ್ ಆಯುಕ್ತರು, ಮನಪಾ.**

ವೇಸ್ಟೇಜ್ ಹೋಗಿ ಪ್ರತಿದಿನ 1200 ಕ್ಯುಸೆಕ್ ನೀರು ಜಿಲ್ಲೆಗೆ ಹರಿದು ಬರುತ್ತಿದೆ. ಇದರಲ್ಲಿ 385 ಕ್ಯುಸೆಕ್ ನೀರು ಸೂಳೆಕೆರೆಗೆ ಹರಿದರೆ, ಉಳಿದ ನೀರು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಹಾಗೂ ದಾವಣಗೆರೆಯ ಎರಡು ಕೆರೆಗಳಿಗೆ ಹರಿಯುತ್ತಿದೆ. ಈಗ ನಾಲೆಯಲ್ಲಿ ನೀರು ಹರಿಸಿರುವುದರಿಂದ ಟಿವಿ ಸ್ಟೇಷನ್ ಮತ್ತು ಕುಂದುವಾಡ ಕೆರೆಗೂ ನೀರು ಹರಿಯುತ್ತಿದೆ. ಟಿವಿ ಸ್ಟೇಷನ್ ಕೆರೆಯಲ್ಲಿ 6 ಅಡಿ ನೀರಿದೆ, ಕುಂದುವಾಡ ಕೆರೆಯಲ್ಲಿ5 ಅಡಿ ನೀರಿದೆ. ಸದ್ಯಕ್ಕೆ ಈ ಎರಡೂ ಕೆರೆಗಳ ನೀರು ಬಳಸುತ್ತಿಲ್ಲ, ನದಿ ನೀರು ಹೆಚ್ಚಿರುವುದರಿಂದ ಆ ನೀರೇ ನಗರಕ್ಕೆ ಸರಬರಾಜು ಆಗುತ್ತಿದೆ. ನದಿ ನೀರು ಹರಿವು ಇಳಿದರೆ ಈ ನೀರು ಬಳಕೆಗೆ ಬರಲಿದೆ.